ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ

ಶ್ರೀ ಆದಿ ಶಂಕರಾಚಾರ್ಯರ

# ಬ್ರಹ್ಮ ಎಂದರೆ?

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್



ಕನ್ನಡ ಅನುವಾದ :
ಕೆ. ಶೋಭಾಲತಾ ಮಲ್ಲಿಕಾರ್ಜುನ

ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದದೊಂದಿಗೆ

## ಶ್ರೀ ಆದಿ ಶಂಕರಾಚಾರ್ಯರ

# ‘ಬ್ರಹ್ಮ ಎಂದರೆ?’

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್



ಕನ್ನಡ ಅನುವಾದ : **ಕೆ. ಶೋಭಾಲತ ಮಲ್ಲಿಕಾರ್ಜುನ**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**BRAHMA YENDARE?**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.

**M.: 9449695503, 8050082689, 9886532204**

| | | |
|---|---|---|
| ಮೊದಲನೆಯ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಷನ್ಸ್<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್ ಫೀಲ್ಡ್,<br>ಬೆಂಗಳೂರು – 560 066<br>ಮೊ. : 9449695503, 9886532204 |
| ಬಳಸಿದ ಕಾಗದ | : | ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 40/– |
| ಪುಟಗಳು | : | iii+37 = 40 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,
**ಎಚ್. ಎನ್. ಶ್ರೀನಿವಾಸ** ಮತ್ತು
**ಎಸ್. ಎನ್. ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ಶಂಕರಾಚಾರ್ಯರ 'ಬ್ರಹ್ಮವೆಂದರೆ?'

ಶಂಕರಾಚಾರ್ಯರು ಬ್ರಹ್ಮವನ್ನು ಕುರಿತು, ಬ್ರಹ್ಮವೊಂದರ ಶ್ರೇಷ್ಠತೆಯನ್ನು ಕುರಿತು ಎಷ್ಟೋ ವಿಷಯಗಳನ್ನು ತಿಳಿಸಿದ್ದಾರೆ.

ಸಹಜವಾಗಿ ನಾವು ಈ ಸೃಷ್ಟಿಯಲ್ಲಿರುವ ಎಷ್ಟನ್ನೋ ಶ್ರೇಷ್ಠವೆಂದುಕೊಳ್ಳುತ್ತಾ ಇರುತ್ತೇವೆ. ಆದರೆ ಇಷ್ಟು ಶ್ರೇಷ್ಠ ಸೃಷ್ಟಿಯನ್ನು ಸೃಷ್ಟಿ ಮಾಡಿರುವಂತ ಆ ಬ್ರಹ್ಮನು ಇನ್ನೆಷ್ಟು ಶ್ರೇಷ್ಠನೋ ಅರ್ಥಮಾಡಿಕೊಳ್ಳಿ. ಸೃಷ್ಟಿಸುವುದೇ ಅಲ್ಲ, ಆ ಸೃಷ್ಟಿಯನ್ನು ನಡೆಸುವುದೇ ಅಲ್ಲ, ಆತನೇ ಈ ಸೃಷ್ಟಿಗೆ ಆಧಾರ. ಅಂದರೆ ಆತನಿದ್ದರೇನೇ ಈ ಸೃಷ್ಟಿ ಇರುತ್ತದೆ, ಆತನು ಇಲ್ಲದಿದ್ದರೆ ಈ ಸೃಷ್ಟಿ ಅದೃಶ್ಯವಾಗಿ ಬಿಡುತ್ತದೆ.

ಆತನು ಎಲ್ಲರಲ್ಲೂ, ಎಲ್ಲೆಲ್ಲೂ ವ್ಯಾಪಿಸಿದ್ದಾನೆ. ಎಲ್ಲರ ಶರೀರಗಳಲ್ಲೂ ಇರುವ ಆತ್ಮನೇ ಅ ಪರಬ್ರಹ್ಮನು. ಆತನೇ ಸೃಷ್ಟಿಕರ್ತ ಎಂದು, ಅಲ್ಲಾ ಎಂದು, ತಂದೆ ಎಂದು, ಭಗವಂತನನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ.

ಅಂತಹ ಶ್ರೇಷ್ಠನಾದಂತಹ ಆ ಬ್ರಹ್ಮನ ಕುರಿತು ಶಂಕರಾಚಾರ್ಯರು ಬಹಳ ಆಳವಾಗಿ, ವಿಪುಲವಾಗಿ ವಿವರಿಸಿದ್ದಾರೆ. ಇದನ್ನು ಅರ್ಥ ಮಾಡಿಕೊಂಡರೆ, ನಾವು ಕೂಡಾ ಆ ಬ್ರಹ್ಮನ ಮೇಲೆ ಆಸಕ್ತಿ ತೋರಿಸುತ್ತೇವೆ, ಅಂದರೆ ಆತ್ಮನ ಮೇಲೆ ಆಸಕ್ತಿ ತೋರಿಸುತ್ತೇವೆ. ಆಸಕ್ತಿ ಯಾವಾಗಾದರೆ ಬೆಳೆಯಿತೋ ಈ ಧ್ಯಾನವನ್ನು ಇನ್ನು ಆಸಕ್ತಿಯಿಂದ ಮಾಡುತ್ತೇವೆ. ಎಷ್ಟೋ ಶ್ರದ್ಧೆಯಿಡುತ್ತೇವೆ. ಒಂದು ರೀತಿಯಲ್ಲಿ ಹೇಳಬೇಕೆಂದರೆ ಜೀವನವನ್ನು ಧನ್ಯ ಮಾಡಿಕೊಳ್ಳುತ್ತೇವೆ. ಅಂದರೆ ಜೀವನದಲ್ಲಿ ಹೊಂದಬೇಕಾದದ್ದನ್ನು ಹೊಂದುತ್ತೇವೆ. ಆ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳದ ಹೊರತು ಮೋಕ್ಷವು ಲಭಿಸುವುದಿಲ್ಲ ಎಂದು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು.

ಆದ್ದರಿಂದ ಶಂಕರಾಚಾರ್ಯರು ಆ ಬ್ರಹ್ಮವೊಂದರ ಶ್ರೇಷ್ಠತನವನ್ನು, ಲಕ್ಷಣಗಳನ್ನು ವಿವರಿಸಿದ್ದಾರೆ. ಅವುಗಳನ್ನು ತಿಳಿದುಕೊಳ್ಳೋಣ.

**“ನೋಡುವುದು, ಕೇಳುವುದು ಎಲ್ಲಾ ಕೂಡಾ ಬ್ರಹ್ಮಕ್ಕಿಂತ ಬೇರೆಯಾಗಿಲ್ಲ. ಆತ್ಮ ಜ್ಞಾನ ಉಂಟಾದ ತಕ್ಷಣ ಪ್ರಪಂಚವೆಲ್ಲಾ ಸಚ್ಚಿದಾನಂದ ಸ್ವರೂಪವಾದ ಅದ್ವೈತ ಬ್ರಹ್ಮವಾಗಿ ಕಾಣಿಸುತ್ತದೆ”.**

ಇಲ್ಲಿ ನಾವು ಈ ಕಣ್ಣಿನಿಂದ ಎಷ್ಟೋ ಜನರನ್ನು, ಎಷ್ಟನ್ನೋ ನೋಡುತ್ತಿದ್ದೇವೆ. ನಮ್ಮ ಕಣ್ಣಿಗೆ ಕಾಣಿಸುವವರೆಗೆ ಎಷ್ಟೋ ಲೋಕಗಳು ಅಂದರೆ ಸೂರ್ಯನು, ಚಂದ್ರನು, ನಕ್ಷತ್ರಗಳು, ನವಗ್ರಹಗಳು ಹೀಗೆ ಎಷ್ಟೋ ನೋಡುತ್ತಿದ್ದೇವೆ. ಹಾಗೆಯೇ ಕಾಣಿಸದವುಗಳು ಕೂಡಾ ಎಷ್ಟೋ ಇವೆ ಎಂದು ತಿಳಿದುಕೊಳ್ಳುತ್ತಿದ್ದೇವೆ.

ಇವೆಲ್ಲಾ ಕೂಡಾ ಬ್ರಹ್ಮಕ್ಕಿಂತ ಬೇರೆಯಾಗಿಲ್ಲ, ಎಲ್ಲಾ ಆತನೇ ಎಂದು ತಿಳಿದುಕೊಳ್ಳಬೇಕು. ನೀವು ಏನನ್ನು ನೋಡುತ್ತಿರುವರೋ ಅವೆಲ್ಲಾ ಬ್ರಹ್ಮವೇ. ನಾವು ನೋಡುತ್ತಿರುವವೆಲ್ಲಾ ಕೂಡಾ ಆ ಬ್ರಹ್ಮನಿಂದಲೇ ಉದ್ಭವಿಸಿವೆ, ಅಂದರೆ ಆತನೇ ಸೃಷ್ಟಿಸಿದ್ದಾನೆ.

ಆತನಿಂದಲೇ ಅಂದರೆ ಆತನಲ್ಲಿಯ ಭಾಗಗಳೇ, ಪ್ರತ್ಯೇಕಿಸಿ ಬೇರೆ ಏನೂ ಇಲ್ಲ, ಎಲ್ಲಿಂದಲೋ ಬಂದಿಲ್ಲ. ಒಂದು ಜೇಡರ ಹುಳು ತನ್ನಿಂದಲೇ ಒಂದು ಜೇಡಗೂಡನ್ನು ನಿರ್ಮಿಸುತ್ತದೆ, ಬೇರೆ ವಸ್ತುವನ್ನು ಎಲ್ಲಿಂದಲೋ ತಂದುಕೊಳ್ಳುವುದಿಲ್ಲ. ತನ್ನಿಂದ ಬಂದದ್ದರಿಂದಲೇ ನಿರ್ಮಿಸುತ್ತದೆ. ಹಾಗೆಯೇ ಆ ಬ್ರಹ್ಮನಿಂದಲೇ ಅಂದರೆ ಆತ್ಮನಿಂದಲೇ ಸಮಸ್ತ ಸೃಷ್ಟಿ, ಸಮಸ್ತ ಲೋಕಗಳು, ಸಮಸ್ತ ಜೀವರಾಶಿಗಳು ಉದ್ಭವಿಸಿದವು. ಇವೆಲ್ಲಾ ಕೂಡಾ ಬ್ರಹ್ಮಕ್ಕಿಂತ ಬೇರೆಯಾಗಿ ಇಲ್ಲ. ಅದಕ್ಕೆ ದೊಡ್ಡವರು ಹೇಳುತ್ತಾರೆ ಎಲ್ಲವು ಭಗವಂತನೇ, ಎಲ್ಲಾ ಭಗವಂತನೇ. ಆತನಿಲ್ಲದ್ದು, ಆತನಲ್ಲದ್ದು ಎಂಬುದು ಏನೂ ಇಲ್ಲ ಎಂದು ಹೇಳುತ್ತಾರೆ.

ನಾವು ಶ್ರೇಷ್ಠ, ಶ್ರೇಷ್ಠವೆಂದುಕೊಳ್ಳುವವೆಲ್ಲಾ, ಕೇಳುವಂತವು, ತಿಳಿದುಕೊಳ್ಳುವಂತವು ಏನಾದರೂ ಇವೆಯೋ ಅವೆಲ್ಲಾ ಬ್ರಹ್ಮವೇ, ಬ್ರಹ್ಮನ ಕುರಿತು ಇನ್ನು ಎಷ್ಟನ್ನೋ ತಿಳಿದುಕೊಳ್ಳುವುದಕ್ಕೆ ಮಾನವರು ಎಷ್ಟೋ ಅಧ್ಯಯನ ಮಾಡುತ್ತಿದ್ದಾರೆ. ಶಂಕರಾಚಾರ್ಯರು ನೀನು ಯಾವುದರ ಕುರಿತು ಕೇಳುತ್ತಿರುವೆಯೋ ಎಲ್ಲಾ ಬ್ರಹ್ಮವೇ! ಮಗು, ಆತನಿಗಿಂತ ಬೇರೆಯಾಗಿ ಏನೂ ಇಲ್ಲ. ಆತ್ಮಜ್ಞಾನ ಉಂಟಾದಾಗಲೇ ಪ್ರಪಂಚವೆಲ್ಲಾ ಸಚ್ಚಿದಾನಂದಾ ಸ್ವರೂಪವಾದ ಅದ್ವೈತ ಬ್ರಹ್ಮವಾಗಿ ಕಾಣಿಸುತ್ತದೆ ಎಂದರು.

ಇದು ಸಾಮಾನ್ಯರಿಗೆ ಅರ್ಥವಾಗದೇ ಇರಬಹುದು. ಅದು ಬೇರೆ, ಇದು ಬೇರೆ, ಅವರು ಬೇರೆ, ಇವನು ಬೇರೆ, ಆ ಜಂತುವು, ಪ್ರಾಣಿಯು ಬೇರೆ ಈ ಪ್ರಾಣಿಯು ಬೇರೆ ಎಂಬ ಭಾವದೊಂದಿಗೆ ಇರುತ್ತಾರೆ. ಬೇರೆ ಬೇರೆ ಎಂಬ ಭಾವಗಳಿಂದಲೇ ಈ ದ್ವೇಷಗಳು,

ಅಸೂಯೆಗಳು, ಕಕ್ಷೆಗಳು, ಕಾರ್ಪಣ್ಯಗಳು ಇವನ್ನೆಲ್ಲಾ ಪ್ರದರ್ಶಿಸುತ್ತಿದ್ದಾರೆ. ನೀವು ಯಾವಾಗಾದರೆ ಆತ್ಮಜ್ಞಾನವನ್ನು ಹೊಂದುತ್ತಿರೋ ಆಗ ತಿಳಿಯುತ್ತದೆ.

ಒಟ್ಟಾರೆ ಎಲ್ಲಾ ಆ ಸಚ್ಚಿದಾನಂದನ ಸ್ವರೂಪ ಸತ್, ಚಿತ್ ಆನಂದ ಎಂದರೆ ಸತ್ಯವಾದ, ಚೈತನ್ಯವಂತವಾದ, ಆನಂದವಾದಂತಹ ಅದ್ವೈತ ಬ್ರಹ್ಮ, ಅಂದರೆ ಬೇರೆಯಾಗಿ ಇಲ್ಲದಂತಹ ಬ್ರಹ್ಮವನ್ನಾಗಿ ನೀವು ತಿಳಿದುಕೊಳ್ಳಬಲ್ಲವರಾಗುತ್ತೀರಿ.

ನೀವು ಈ ಸ್ಥಿತಿಗೆ ಬರುವವರೆಗೂ ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರುತ್ತೀರಿ. ಆದ್ದರಿಂದ ಜನ್ಮವಿಲ್ಲದ ಸ್ಥಿತಿಯನ್ನು ಹೊಂದಬೇಕೆಂದರೆ ಬ್ರಹ್ಮದ ಕುರಿತು, ಬ್ರಹ್ಮದ ಶ್ರೇಷ್ಠತೆಯನ್ನು ಕುರಿತು ತಿಳಿದುಕೊಳ್ಳಬೇಕು. ಆದ್ದರಿಂದ ಜ್ಞಾನವು ಲಭಿಸುವವರೆಗೂ ಎಲ್ಲಾ ಬೇರೆ ಬೇರೆಯಾಗಿ ಅನ್ನಿಸುತ್ತಿದೆ. ಜ್ಞಾನವನ್ನು ಹೊಂದಿದ ಮೇಲೆ ಸಮಸ್ತವೂ ಒಂದೇ ಎನ್ನುವಂತಹ ವಿಷಯವು ಅರ್ಥವಾಗುತ್ತದೆ. ಅವರು ಇನ್ನು ಏನು ಹೇಳಿದ್ದಾರೆಂದರೆ,

**01**

**"ಬ್ರಹ್ಮವನ್ನು ಪ್ರಪಂಚದಲ್ಲಿರುವ ಸಾಮಾನ್ಯ ಲಕ್ಷಣಗಳಿಂದ ಪರಿಶೀಲಿಸುವುದಕ್ಕೆ ಸಾಧ್ಯವಾಗದಂತೆ ವಿಲಕ್ಷಣವಾಗಿ ಇರುತ್ತದೆ. ಬ್ರಹ್ಮವಿಲ್ಲದೇ ಈ ಪ್ರಪಂಚದಲ್ಲಿ ಏನೂ ಇಲ್ಲ. ಬ್ರಹ್ಮಕ್ಕಿಂತ ಬೇರೆಯಾಗಿ ಈ ಪ್ರಪಂಚದಲ್ಲಿ ಏನಾದರೂ ಗೋಚರಿಸಿತಾದರೆ ಅದು ಮರೀಚಿಕೆಯಲ್ಲಿನ ನೀರಿನಂತೆ ಅಸತ್ಯವಾದದ್ದೇ" ಎಂದಿದ್ದಾರೆ.**

ಏಕೆ ನಾವು ಇದನ್ನು ತಿಳಿದುಕೊಳ್ಳಬೇಕು? ಜ್ಞಾನವನ್ನು ಹೆಚ್ಚಿಸಿ ಕೊಳ್ಳುವುದಕ್ಕೆ, ಜ್ಞಾನವಂತರಾಗುವುದಕ್ಕೆ, ದುಃಖದಿಂದ ಹೊರಬರುವುದಕ್ಕೆ ಬೇರೆ ಬೇರೆಯಾಗಿ ಇದೆಯೆಂದು ಭಾವಿಸಿದರೆ ನೀನು ದುಃಖದಲ್ಲಿಯೇ ಇರುತ್ತೀಯ. ನಿನಗೆ ಭಿನ್ನವಾಗಿ ಯಾವುದೂ ಇಲ್ಲ, ಇದೆಯೆಂದು ಭಾವಿಸಿರುವೆಯಾ! ನಿನಗೆ ದುಃಖವೇ. ಅದಕ್ಕೆ ಪತ್ರೀಜಿಯವರು **"ನಿನ್ನಲ್ಲಿ ಲವಲೇಶ ದುಃಖವಿದ್ದರೂ ನೀನು ಅಜ್ಞಾನದಲ್ಲಿದಂತೆಯೇ"** ಎಂದಿದ್ದಾರೆ. ಬೇರೆ ಎಂದುಕೊಂಡು ನೀನು ಏನು ಮಾಡಿದರೂ ಅದರ ಫಲವಾಗಿ ದುಃಖವನ್ನೇ ಹೊಂದುವೆ.

ಅದಕ್ಕೆ ಅವರು ಹೇಳಿದ್ದಾರೆ, ಈ ಬ್ರಹ್ಮವನ್ನು ಪ್ರಪಂಚದಲ್ಲಿರುವಂತಹ ಸಾಮಾನ್ಯ ಲಕ್ಷಣಗಳಿಂದ ಪರಿಶೀಲಿಸುವದಕ್ಕೆ ಸಾಧ್ಯವಾಗದಂತೆ ವಿಲಕ್ಷಣವಾಗಿ ಪ್ರತ್ಯೇಕವಾದದ್ದಾಗಿ ಕಾಣಿಸುತ್ತದೆ. ಅಂದರೆ ಎಲ್ಲಾ ಆತನೇ ಆದಾಗ ನೀನು ಆ ಬ್ರಹ್ಮವನ್ನು ಯಾವುದರಿಂದ ಹೋಲಿಸುವೆ? ನಿನಗಿರುವ ಸಾಮಾನ್ಯ ಜ್ಞಾನದಿಂದ ಬ್ರಹ್ಮವನ್ನು ಹೇಗೆ ತಿಳಿದುಕೊಳ್ಳುವೆ?.

ಆದ್ದರಿಂದ ಆ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಆದ್ದರಿಂದ ಬ್ರಹ್ಮವಿಲ್ಲದೆ ಈ ಪ್ರಪಂಚದಲ್ಲಿ ಏನೂ ಇಲ್ಲ, ಬ್ರಹ್ಮಕ್ಕಿಂತ ಈ ಪ್ರಪಂಚದಲ್ಲಿ ಏನಾದರೂ ಗೋಚರಿಸಿದಂತಾದರೆ ಅದು ಮರೀಚರಿಕೆಯಲ್ಲಿ ನೀರಿನಂತೆ ಅಸತ್ಯವಾದದ್ದು. ಬ್ರಹ್ಮವಲ್ಲದೆ ನೀನು ಏನಾದರೂ ನೋಡಿದೆಯಾದರೆ! ಆಲೋಚಿಸಬೇಕು.

ಬ್ರಹ್ಮವಲ್ಲದೆ ಇರುವುದು ನೀನು ಏನನ್ನಾದರೂ ಕಂಡುಹಿಡಿ. ಪ್ರಪಂಚವೆಲ್ಲಾ ತಿರುಗು, ಎಷ್ಟನ್ನೋ ನೋಡು, ಸಮುದ್ರದಲ್ಲಿ ನೋಡು, ಆಕಾಶದಲ್ಲಿ ನೋಡು, ಭೂಮಿಯ ಮೇಲೆ ನೋಡು, ಚಂದ್ರನಲ್ಲಿ ನೋಡು, ಸೂರ್ಯನಲ್ಲಿ ನೋಡು, ತಿರುಗು, ಬ್ರಹ್ಮವಲ್ಲದೆ ಬೇರೆಯಾಗಿ ಈ ಪ್ರಪಂಚದಲ್ಲಿ ನಿನಗೆ ಏನಾದರೂ ಕಾಣಿಸಿದರೆ ಅದು ಮರೀಚಿಕೆಯಲ್ಲಿ ನೀರಿನಂತೆ ಅಸತ್ಯವಾದದ್ದು.

ನೀವು ದೂರದಿಂದ ಮರೀಚಿಕೆಯನ್ನು ನೋಡಿದಾಗ, ನೀರು ಇರುವಂತೆ ಅನಿಸುತ್ತದೆ. ಆದರೆ ನಿಜವಾಗಿ ಹತ್ತಿರಕ್ಕೆ ಹೋಗಿ ನೋಡಿದರೆ ನೀರು ಇರುವುದಿಲ್ಲ. ಆದರೆ ನೀರು ಇದೆಯೆಂದು ಅಂದುಕೊಳ್ಳುತ್ತೇವೆ, ಅಂದರೆ ಇಲ್ಲದ್ದನ್ನು ಇದೆ ಎಂದುಕೊಳ್ಳುತ್ತೇವೆ. ಇದೂ ಅಷ್ಟೇ. ಆತನಿಗೆ ಭಿನ್ನವಾಗಿ ಇನ್ನೊಂದು ಏನಾದರೂ ಇದ್ದರೆ ಅದು ಮರೀಚಿಕೆಯಂತಾದ್ದು ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಇದು ನಿಮಗೆ ಅರ್ಥವಾದರೆ ನೀವು ಆ ರೀತಿಯಾಗಿ ವರ್ತಿಸಬಲ್ಲಿರಾದರೆ ನಿಮಗೆ ಇನ್ನು ಜನ್ಮವೇ ಇರದು. ಆದರೆ ಸುಮ್ಮನೆ ಅಂದುಕೊಳ್ಳುತ್ತಿದ್ದೇವೆ, ಓದುತ್ತಿದ್ದೇವೆ, ತಿಳಿದುಕೊಳ್ಳುತ್ತಿದ್ದೇವೆ, ಆದರೆ ಆಚರಣೆಯಲ್ಲಿ ಇಡಲಾರದೆ ಹೋಗುತ್ತಿದ್ದೇವೆ.

ಒಚಿದು ಬಾರಿ ಶಂಕರಾಚಾರ್ಯರು ಗಂಗಾ ನದಿಯಲ್ಲಿ ಸ್ನಾನ ಮಾಡಿ ತಿರುಗಿ ಹೋಗುತ್ತಿದ್ದಾರೆ. ದಾರಿಯಲ್ಲಿ ಒಬ್ಬ ಛಂಡಾಲನು ಎದುರಾದನು. ಆತನ ಶಿಷ್ಯರು ಗುರುಗಳು ಬರುತ್ತಿದ್ದಾರೆ, ಪಕ್ಕಕ್ಕೆ ಸರಿದುಕೋ ಎಂದರು. ಶಂಕರಾಚಾರ್ಯರು ಕೂಡಾ ಪಕ್ಕಕ್ಕೆ ಸರಿದುಕೋ ಎಂದರು. ಆಗ ಛಾಂಡಾಲನು ಕೇಳಿದನು, ಯಾವುದನ್ನೂ ಪಕ್ಕಕ್ಕೆ ಸರಿ ಎನ್ನುತ್ತಿದ್ದೀರಿ?. ಈ ದೇಹವನ್ನಾ, ಇಲ್ಲದಿದ್ದರೆ ಏನನ್ನು? ನೀನು ಯಾವುದರಲ್ಲಿ ದೊಡ್ಡವನು? ಎಂದನು.

ಯಾವ ಪಂಚಭೂತಗಳಿಂದ ಈ ಶರೀರವು ತಯಾರಿಸಲ್ಪಟ್ಟಿದೆಯೋ! ನಿನ್ನ ಶರೀರವೂ ಕೂಡಾ ಅದರಿಂದಲೇ ತಯಾರು ಮಾಡಲ್ಪಟ್ಟಿದೆ. ಯಾವ ಆತ್ಮವಾದರೆ ಈ ಶರೀರದಲ್ಲಿದೆಯೋ! ಅದೇ ನಿನ್ನ ಶರೀರದಲ್ಲಿದೆ. ನೀನು ಏಕೆ ದೊಡ್ಡವನು? ಯಾವುದರಲ್ಲಿ ಶ್ರೇಷ್ಠನು? ಇವೆಲ್ಲವನ್ನು ಕೇಳಿದ್ದರಿಂದ ಶಂಕರಾಚಾರ್ಯರಿಗೆ ಅರ್ಥವಾಯಿತು. ಈತನು

ಸಾಮಾನ್ಯನಲ್ಲ. ಇಲ್ಲಿಯವರೆಗೆ ನಾನು ಅವನು ಬೇರೆ ಅಂದುಕೊಂಡೆನು, ಅವನೂ ಪರಬ್ರಹ್ಮ ಸ್ವರೂಪವೇ, ನನಗಿಂತ ಕಡಿಮೆ ಹೇಗಾಗುತ್ತಾನೆ? ಎಂದು ಗ್ರಹಿಸಿ ಛಂಡಾಲನ ಕಾಲಿಗೆ ಬಿದ್ದರು.

ಈಗ ನೀವು ಮಾಡುವ ಸಾಧನೆಯಲ್ಲಿ ಆ ಸ್ಥಾಯಿಗೆ ಬರಬೇಕು. ಈ ಅರಿಷಡ್ವರ್ಗಗಳಾಗಲಿ, ಈ ಲಕ್ಷಣಗಳಾಗಲಿ, ಗುಣಗಳಾಗಲಿ, ನಿಮ್ಮಲ್ಲಿ ಇನ್ನೂ ಉಂಟಾಗುತ್ತಿವೆ ಎಂದರೆ, ಇವನಿಗಿಂತ ಅವನು ಶ್ರೇಷ್ಠನಾದವನು, ಅವನಿಗಿಂತ ಇವನು ದೊಡ್ಡವನು ಎಂದು ಅವರನ್ನು, ಇವರನ್ನು ವಿಮರ್ಶಿಸುತ್ತಿದ್ದೀರೆಂದರೆ, ಇವರು ಇಂತಹವರು ಎಂದು ನಿರ್ಣಯಗಳನ್ನು ಮಾಡುತ್ತಿದ್ದೀರೆಂದರೆ ಇನ್ನೂ ನಿಮಗೆ ಬ್ರಹ್ಮವು ಅರ್ಥವಾಗಿಲ್ಲವೆಂದೇ ಲೆಕ್ಕ. ಇನ್ನೂ ಬೆಳೆದಿಲ್ಲವೆಂದೇ ಲೆಕ್ಕ. ಇನ್ನೂ ನಿಮ್ಮ ಸಾಧನೆ ಆ ಸ್ಥಾಯಿಗೆ ಬಂದಿಲ್ಲವೆಂದು ಲೆಕ್ಕ. ನಿಮ್ಮ ಜ್ಞಾನ ಪರಿಧಿ ಬೆಳೆದಿಲ್ಲವೆಂದು ಲೆಕ್ಕ. ಆದ್ದರಿಂದ ಆ ಸ್ಥಿತಿಗೆ ನೀವು ಬೆಳೆಯಬೇಕು.

ಬ್ರಹ್ಮಕ್ಕಿಂತ ಬೇರೆಯಾಗಿ, ಭಿನ್ನವಾಗಿ ಈ ಪ್ರಪಂಚದಲ್ಲಿ ಏನೂ ಇಲ್ಲ, ಎಲ್ಲಾ ಒಂದೇ. ನಾನು ಏನಾದರೂ ಆಗಿದ್ದೇನೋ, ಎಲ್ಲಾ ಅವೇ ಎಂಬ ಸ್ಥಾಯಿಗೆ ಬರಬೇಕು. ನೀವು ಮಾಡುವ ಧ್ಯಾನವು, ನೀವು ಹೊಂದುವ ಜ್ಞಾನವು ಆ ಸ್ಥಾಯಿಯಲ್ಲಿರಬೇಕು.

ಪತ್ರೀಜಿಯವರು ಅದನ್ನೇ ಹೇಳುತ್ತಾರೆ. ಅವನು ಬೇರೆ, ಇವನು ಬೇರೆ ಎಂದುಕೊಳ್ಳುತ್ತಾ, ಅವನ ಮೇಲೆ ಅಸೂಯೆ ಪಡುತ್ತಾ, ಇವನ ಮೇಲೆ ಕಕ್ಷೆ ಕಟ್ಟುತ್ತಾ ಇದ್ದರೆ ನಿನಗೆ ಏನು ಅರ್ಥವಾಗಿದೆ? ನಿನ್ನ ಬಳಿ ಏನು ಜ್ಞಾನವಿದೆ? ಎಷ್ಟು ಬುದ್ಧಿಹೀನತೆ ಅದು? ಇದರಲ್ಲಿ ಬರದಿದ್ದರೆ ಸಹಜವೇ. ಪತ್ರೀಜಿಯವರ ಮಾರ್ಗದಲ್ಲಿ ಬಂದರೂ ಇನ್ನೂ ಬೇರೆ ಬೇರೆ ಎನ್ನುವಂತೆ ದ್ವೇಷಗಳು, ಅಸೂಯೆಗಳು, ಕಕ್ಷೆಗಳು, ಕಾರ್ಪಣ್ಯಗಳನ್ನು ಪ್ರದರ್ಶಿಸುತ್ತಿದ್ದೀರಿ ಎಂದರೆ ಎಷ್ಟು ಅಜ್ಞಾನದಲ್ಲಿದ್ದಿರೋ ಎಂದು ಅರ್ಥ ಮಾಡಿಕೊಳ್ಳಬಹುದು.

ಈ ದೇಶದಲ್ಲಿಯೇ ಅಲ್ಲ, ಪ್ರಪಂಚದಲ್ಲಿಯೇ ಅಲ್ಲ, ಸೃಷ್ಟಿಯಲ್ಲಿ ಎಲ್ಲಿಗೆ ಹೋದರೂ, ಎಷ್ಟನ್ನು ತಿಳಿದುಕೊಳ್ಳುತ್ತಿದ್ದರೂ ಸಮಸ್ತವೂ ಆತನೇ. ತರತರದ ರೂಪಗಳು ಇವೆಯಾಗಲಿ, ಎಲ್ಲಾ ಆತನೇ. ಮಡಕೆಗಳು ಬೇರೆ, ಎಲ್ಲಾ ಮಣ್ಣೇ. ಆಭರಣಗಳು ಬೇರೆ, ಎಲ್ಲಾ ಬಂಗಾರವೇ. ಇದನ್ನೇ ನಾವು ತಿಳಿದುಕೊಳ್ಳಬೇಕಾಗಿರುವುದು. ಆತನ ಶ್ರೇಷ್ಠತೆಯನ್ನು ಕುರಿತು ತಿಳಿದುಕೊಂಡರೆ ನಮ್ಮ ವರ್ತನೆಯಲ್ಲಿ ಎಷ್ಟೋ ಬದಲಾವಣೆ ಬರುತ್ತದೆ.

** ** **

## 02

**'ಅಗ್ನಿಯು ಚೆನ್ನಾಗಿ ಕೆಂಪಾಗಿ ಕಾದ ಕಬ್ಬಿಣದ ಮುದ್ದೆಯಲ್ಲಿ ... ತಾನು ಕಾಂತಿಯುತವಾಗಿ ಪ್ರಕಾಶಿಸುವಂತೆ, ಬ್ರಹ್ಮನು ಬಾಹ್ಯ ಎಲ್ಲಾ ಅಡೆತಡೆಗಳನ್ನು ವ್ಯಾಪಿಸಿ ಸಮಸ್ತ ಪ್ರಪಂಚವನ್ನು ತಾನು ಪ್ರಕಾಶಪಡಿಸುತ್ತಾ ವ್ಯಾಪಿಸಿದ್ದಾನೆ'.**

ಈಗ ನೋಡಿ, ಕಬ್ಬಿಣದ ಮುದ್ದೆಗಳನ್ನು ವಿವಿಧ ರೀತಿಯ ಆಕಾರಗಳಾಗಿ ತಯಾರು ಮಾಡುವುದಕ್ಕೆ ಮೊದಲು ಕೆಂಪಾಗಿ ಕಾಯಿಸುತ್ತಾರೆ. ಆಗ ಅವುಗಳನ್ನು ತಗಡಿನಂತೆ, ಕಂಬಿಗಳಾಗಿ, ಇನ್ನೂ ತರತರದ ಆಕಾರಗಳಲ್ಲಿ ಬಗ್ಗಿಸುತ್ತಾ ಇರುತ್ತಾರೆ. ಕಾಯಿಸಿದ ನಂತರ ಅದು ಸಾಗುತ್ತದೆ, ಅಗಲವಾಗಿ ಹರಡುತ್ತದೆ. ಆದರೆ ಹಾಗೆ ಕೆಂಪಗೆ ಕಾಯಿಸಿದಂತ ಕಬ್ಬಿಣದ ಮುದ್ದೆಯನ್ನು ನಾವು ನೋಡಿದಾಗ ಆ ಕಬ್ಬಿಣದ ಮುದ್ದೆಯ ಒಳಗೆ ಎಷ್ಟೋ ಕಾಂತಿ ಇರುತ್ತದೆ. ಇದು ಎಷ್ಟೋ ಪ್ರಕಾಶವಂತವಾಗಿರುತ್ತದೆ.

ಈ ಕಬ್ಬಿಣದ ಮುದ್ದೆ ಸಹಜವಾಗಿರುವಾಗ ಕಪ್ಪಾಗಿರುತ್ತದೆ, ಕಾಂತಿ ಇರುವುದಿಲ್ಲ. ಆದರೆ ಕಾಯಿಸಿದ ನಂತರ ಅಪಾರವಾದ ಕಾಂತಿಯಿಂದ ಪ್ರಕಾಶಿಸುತ್ತಾ ಇರುತ್ತದೆ. ಅದೇ ವಿಧವಾಗಿ ಬ್ರಹ್ಮವು ಈ ಬಾಹ್ಯದಲ್ಲಿ ಇರುವಂತವನ್ನಲ್ಲದೆ, ಅಂತರದೊಳಗಿರುವವನ್ನು ಕೂಡಾ ಪ್ರಕಾಶಪಡಿಸುತ್ತಾ... ವ್ಯಾಪಿಸಿ ಇದೆ ಎಂದು ಹೇಳುತ್ತಿದ್ದಾರೆ.

ಅಚಿದರೆ ಹೊರಗೆ ಕಾಣಿಸುವಂತವುಗಳಿಗೆ ಅಲ್ಲದೇ ಕಾಣಿಸದವುಗಳಿಗೆ ಇರುವ ಪ್ರಕಾಶವೆಲ್ಲಾ ಆತನದೇ ಎಂದು ಹೇಳುತ್ತಿದ್ದಾರೆ. ನೀವು ನೋಡಿರಿ, ಸೂರ್ಯನು ಬಾರದಿದ್ದರೆ ಸಮಸ್ತ ಲೋಕಗಳು ಕತ್ತಲುಮಯ. ಆದರೆ ಸೂರ್ಯನು ಬಂದೊಡನೆ ಬೆಳಕಿನಿಂದ ಬೆಳಗಿಬಿಡುತ್ತದೆ. ಅಷ್ಟು ಪ್ರಕಾಶವಂತವಾದವನು ಸೂರ್ಯನು. ಇಲ್ಲಿ ಗಮನಿಸಬೇಕಾದದ್ದು ಏನೆಂದರೆ? ಆ ಸೂರ್ಯನ ಪ್ರಕಾಶಕ್ಕೆ ಕಾರಣ ಕೂಡಾ ಬ್ರಹ್ಮವೇ. ಬ್ರಹ್ಮದಿಂದಲೇ ಸೂರ್ಯನು ಹಾಗೇ ಪ್ರಕಾಶಿಸುತ್ತಿದ್ದಾನೆ.

ಮತ್ತೇ ಒಬ್ಬ ಸೂರ್ಯನೇ ಅಷ್ಟು ಪ್ರಕಾಶವಾಗಿದ್ದರೆ, ಕೋಟಿ ಸೂರ್ಯರನ್ನು ಸೇರಿಸಿದರೆ ಎಷ್ಟು ಪ್ರಕಾಶವೋ! ಆಲೋಚಿಸಿರಿ. ಅಷ್ಟು ಪ್ರಕಾಶ ಬ್ರಹ್ಮನದು. ಆತನು ಕೋಟಿ ಸೂರ್ಯರ ಕಾಂತಿಯುಳ್ಳವನು. ಆತನನ್ನು ವರ್ಣಿಸಲಾರೆವು, ಅಂತಹ ಪ್ರಕಾಶವಂತವಾದ ಬ್ರಹ್ಮ ಅಂದರೆ ಆತ್ಮ ಎಲ್ಲರ ಶರೀರದಲ್ಲಿ ನಿಕ್ಷಿಪ್ತವಾಗಿದೆ. ಅಷ್ಟು ಪ್ರಕಾಶವುಳ್ಳವನೇ ಆ ಬ್ರಹ್ಮನು. ಆತ್ಮ ಯಾವಾಗಲೂ ಪ್ರಕಾಶಿಸುತ್ತಿರುತ್ತದೆ. ಆದ್ದರಿಂದ ಜ್ಯೋತಿಯೊಂದಿಗೆ ಹೋಲಿಸುತ್ತಾರೆ. ಆತ್ಮವು ಸವೆಯದಂತಹ ಪ್ರಕಾಶವುಳ್ಳದ್ದು.

ಅದಕ್ಕೆ ನೀವು ನೋಡಿ ಗುಡಿಗಳಲ್ಲಿ ಅಖಂಡ ಜ್ಯೋತಿಯನ್ನು ಬೆಳಗಿಸುತ್ತಾರೆ. ಅದು ಯಾವಾಗಲೂ ಬೆಳಗುತ್ತಾ ಇರಬೇಕು ಎನ್ನುತ್ತಾರೆ. ಅದನ್ನು ಆರಗೊಡುವುದಿಲ್ಲ, ಆರಿದರೆ

ಅನಿಷ್ಟವೆನ್ನುತ್ತಾರೆ. ಅದಕ್ಕೆ ಮುಖ್ಯ ಕಾರಣ, ಗುಡಿ ಎಂಬುದು ಮಾನವನ ದೇಹಕ್ಕೆ ಪ್ರತಿರೂಪ. ಮಾನವನ ದೇಹವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಗುಡಿಯನ್ನು ರೂಪಿಸಿದ್ದಾರೆ. ಈ ಶರೀರವನ್ನು ಗುಡಿಯೊಂದಿಗೆ ಹೋಲಿಸುತ್ತಾರೆ. ಈ ಶರೀರದಲ್ಲಿರುವ ದೈವ ಅಂದರೆ ಯಾವ ಬ್ರಹ್ಮವಾದರೆ ಎಲ್ಲವನ್ನು ಪ್ರಕಾಶಗೊಳಿಸುತ್ತದೋ, ಅಂತಹ ಆ ಬ್ರಹ್ಮವನ್ನು, ಅಂದರೆ ಆತ್ಮವನ್ನು ಅಖಂಡ ಜ್ಯೋತಿಗೆ ಹೋಲಿಸುತ್ತಾರೆ. ಗುಡಿಯಲ್ಲಿ ಅದಕ್ಕೇ ಜ್ಯೋತಿ ಇರುತ್ತದೆ. ನೋಡಿರಿ, ಈ ಆತ್ಮಜ್ಯೋತಿ ಆರಿ ಹೋದರೆ ಅಂದರೆ ಅವನು ಮರಣಿಸಿದನು ಎಂದು ಹೇಳುತ್ತಾರೆ. ಆದ್ದರಿಂದ ಅದು ಎಂದಿಗೂ ಆರಬಾರದು. ಇದು ಆರಿ ಹೋಗದಂತೆ ಇರಬೇಕೆಂದು ಹೇಳುವುದಕ್ಕೇ ಆ ಜ್ಯೋತಿಯನ್ನು ಅಲ್ಲಿ ಇರಿಸಲಾಗಿದೆ. ಹಾಗೆಯೇ ಶರೀರದಲ್ಲಿ ಓಂಕಾರನಾದ ಕೇಳಿಸುತ್ತಾ ಇರುತ್ತದೆ, ಅದೇ ಗುಡಿಯಲ್ಲಿ ಮೊಳಗುವ ಘಂಟಾನಾದ, ಹಾಗೆ ಈ ಪಂಚಭೂತಗಳ ಪ್ರತಿರೂಪವೇ ಈ ಶರೀರ.

ಎಲುಬುಗಳೆಲ್ಲಾ ಭೂಮಿಗೆ, ಅಗ್ನಿ ಎಂದರೆ ಉಷ್ಣ, ನೀವು ಗಮನಿಸಿದರೆ ಯಾರ ಶರೀರವಾಗಲಿ ಬೆಚ್ಚಗಿರುತ್ತದೆ. ಶರೀರದಲ್ಲಿ 75% ನೀರು ಇರುತ್ತದೆ, ಹಾಗೆಯೇ ವಾಯು ಯಾವಾಗಲೂ ಸಂಚರಿಸುತ್ತಲೇ ಇರುತ್ತದೆ. ಹಾಗೆಯೇ ಆಕಾಶತತ್ವವಾದ ಮನಸ್ಸು ಕೂಡಾ ಶರೀರದಲ್ಲಿ ಇರುತ್ತದೆ. ಅಂದರೆ ದೇಹಕ್ಕೆ ಪ್ರತಿರೂಪವಾಗಿ ತಯಾರು ಮಾಡಲ್ಪಟ್ಟಿರುವುದೇ ಗುಡಿ. ಶರೀರದಲ್ಲಿರುವ ಆತ್ಮನೇ ಆ ಗುಡಿಯಲ್ಲಿ ಇರುವ ವಿಗ್ರಹ. ಈ ವಿಷಯವನ್ನು ಪೀಳಿಗೆಗಳು, ಮಾನವನು, ಮರೆತು ಹೋಗಬಾರದು ಎಂದೇ ಈ ರೀತಿಯಲ್ಲಿ ಗುಡಿಗಳನ್ನು ನಿರ್ಮಿಸಿದ್ದಾರೆ. ಗುಡಿಗಳನ್ನು ಕಟ್ಟಿರುವುದಕ್ಕೆ ಕಾರಣವೂ ಇದೇ.

ಇಲ್ಲದೇ ಹೋದರೆ ದೇವರು ಯಾರೋ? ಎಲ್ಲಿದ್ದಾನೋ? ಹೇಗೆ ತಿಳಿಯುತ್ತದೆ? ತಿಳಿದುಕೊಳ್ಳುವುದೂ ಕೂಡಾ ಬಹಳ ಕಷ್ಟವೇ. ಆದ್ದರಿಂದ ಮತ್ತೆ, ಈ ಬುದ್ಧಿವಂತಿಕೆಯಿಂದ ಈ ತರಹದ ಆಕಾರವನ್ನು ತಯಾರು ಮಾಡಲಾಗಿದೆ. ಅದಕ್ಕೆ ಹೇಳಿದ್ದಾರಲ್ಲ!

**"ದೇಹೋ ದೇವಾಲಯ ಪ್ರೋಕ್ತಃ ಜೀವೋದೇವೋ ಸನಾತನಃ"**

ಅಂದರೆ ಈ ದೇಹವೆಂಬ ದೇವಾಲಯದಲ್ಲಿರುವ ಜೀವವೇ ದೇವರು ಎಂದೂ ಕೂಡಾ ಹೇಳಲಾಗಿದೆ. ಆದ್ದರಿಂದ ಅಂತಹ ಮಹತ್ವವನ್ನುಳ್ಳಂತಹ ಬ್ರಹ್ಮವೊಂದರ ವಿಷಯಗಳನ್ನು ತಿಳಿದುಕೊಳ್ಳಬೇಕು.

** ** **

**03**

### ಅವರು ಇನ್ನೂ ಏನು ಹೇಳಿದ್ದಾರೆಂದರೆ?

**"ಯಾವ ಕಾಂತಿಯಿಂದಾದರೆ ಸೂರ್ಯಾದಿಗಳು ಪ್ರಕಾಶಿಸುತ್ತಿದ್ದಾರೋ, ಯಾವುದನ್ನು ಆ ಸೂರ್ಯಾದಿಗಳು ಪ್ರಕಾಶಿಸಲಾರರೋ, ಯಾವುರಿಂದಾದರೆ ಸಮಸ್ತವಾದ ಈ ಜಗತ್ತೆಲ್ಲಾ ಪ್ರಕಾಶಿಸುತ್ತದೋ, ಅದನ್ನೇ ಬ್ರಹ್ಮವೆಂದು ತಿಳಿದುಕೊಳ್ಳುಕೋ" ಎಂದಿದ್ದಾರೆ.**

ಯಾವ ಕಾಂತಿಯಿಂದಾದರೆ ಸೂರ್ಯಾದಿಗಳು ಅಂದರೆ ಸೂರ್ಯನಾಗಲೀ, ಉಳಿದ ಲೋಕಗಳಾಗಲಿ ಪ್ರಕಾಶಿಸುತ್ತಿವೆಯೋ ಆತನು ಇಲ್ಲದಿದ್ದರೆ ಎಲ್ಲಾ ಪ್ರಕಾಶ ಹೀವನೇ, ಆದರೆ ಆತನಿಂದಲೇ ಈ ಸೂರ್ಯನು, ಇವೆಲ್ಲಾ ಪ್ರಕಾಶಿಸುತ್ತಿವೆ. ಆತನು ಇಲ್ಲದಿದ್ದರೆ ಇವರಿಗೆ ಆ ಪ್ರಕಾಶವೇ ಇಲ್ಲ. ಅವರು ಯಾವುದನ್ನೂ ಪ್ರಕಾಶಿಸಲಾರರು ಕೂಡಾ.

ಹಾಗೆಯೇ ಜಗತ್ತೆಲ್ಲಾ ಕೂಡಾ ಆ ಬ್ರಹ್ಮದಿಂದಲೇ ಪ್ರಕಾಶಿಸುತ್ತದೆ ಎಂದಿದ್ದಾರೆ. ಆ ಬ್ರಹ್ಮವನ್ನು ಆರಾಧಿಸಿರೆ ಸಮಸ್ತ ಲೋಕಗಳಲ್ಲಿರುವಂತ ಸಮಸ್ತ ದೇವತೆಗಳನ್ನು ಆರಾಧಿಸಿದಂತೆಯೇ. ಅದಕ್ಕೆ ಯಾವುದರ ಕುರಿತು ತಿಳಿದುಕೊಂಡರೆ ಇನ್ನು ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲವೋ ಅದನ್ನೇ ತಿಳಿದುಕೊಳ್ಳಬೇಕು ಎಂದಿದ್ದಾರೆ.

ಮತ್ತೇ ಯಾವುದರ ಕುರಿತು ತಿಳಿದುಕೊಳ್ಳಬೇಕು? ಬ್ರಹ್ಮದ ಕುರಿತು ತಿಳಿದುಕೊಳ್ಳಬೇಕು. ಬ್ರಹ್ಮ ಅಂದರೆ ಆತ್ಮ, ಆತ್ಮ ಎಲ್ಲಿದೆ? ಅಂತರಂಗದೊಳಗಿದೆ. ಅಂತರಂಗದೊಳಗಿರುವ ಆತ್ಮನ್ನನು ತಿಳಿದು ಕೊಳ್ಳಬೇಕೆಂದರೆ ಏನು ಮಾಡಬೇಕು? ಹೋಗುವ ಮಾರ್ಗವನ್ನೇ ಪತ್ರೀಜಿಯವರು ನಮಗೆ ಬೋಧಿಸಿದಂತಹ "ಶ್ವಾಸದ ಮೇಲೆ ಗಮನ" ಧ್ಯಾನ.

ಈಗ ನಮಗೆ ಸತ್ಯವೆಂದರೆ ಎಷ್ಟು ಶ್ರೇಷ್ಠವಾದದ್ದೋ ಅರ್ಥವಾಗಿದೆ. ಆದ್ದರಿಂದ ಖಚಿತವಾಗಿ ಆತ್ಮನನ್ನು ಅಂದರೆ ಸತ್ಯವನ್ನಾಶ್ರಯಿಸಬೇಕು. ಏಕೆಂದರೆ ಬ್ರಹ್ಮವೇ ಅಂದರೆ ಸತ್ಯವೇ ಇರುವುದು, ಇನ್ನೂ ಏನು ಇರದು. ಆ ಸತ್ಯವಾದದ್ದನ್ನು ಆಶ್ರಯಿಸಿದವರಿಗಿಂತ ಅದೃಷ್ಟವಂತರು ಇನ್ನೂ ಯಾರೂ ಇಲ್ಲ. ಅದಕ್ಕೆ ಪತ್ರೀಜಿಯವರು ವಿಗ್ರಹಾರಾಧನೆ ಬೇಡ, ಸತ್ಯಾರಾಧನೆ ಮಾಡಿರಿ ಎಂದಿದ್ದಾರೆ. ಸತ್ಯಕ್ಕಿಂತ ಮಿಗಿಲಾದದ್ದು ಏನೂ ಇಲ್ಲ, ಸತ್ಯದಿಂದಲೇ ಎಲ್ಲಾ ಉದ್ಭವಿಸಿವೆ, ಆ ಸತ್ಯವೇ ಆತ್ಮ.

ಆತ್ಮನನ್ನು ಆಶ್ರಯಿಸುವ ಮಾರ್ಗವೇ "ಶ್ವಾಸದ ಮೇಲೆ ಗಮನ". ಇಲ್ಲಿ ಮಾನವನು ಅಂದರೆ ಮೂರು ಶರೀರ, ಮನಸ್ಸು, ಆತ್ಮ. ಈ ಆತ್ಮನನ್ನು ಆಶ್ರಯಿಸಬೇಕೆಂದರೆ ಮೊದಲು

ಕಣ್ಣನ್ನು ಮುಚ್ಚಬೇಕು, ಆಗ ಶರೀರದಲ್ಲಿ ಇರುವ ಮನಸ್ಸಿನೊಂದಿಗೆ ಇರುತ್ತೀರಿ. ತಕ್ಷಣವೇ ಆಲೋಚನೆಗಳು ಬರುತ್ತವೆ, ಆಲೋಚನೆಗಳನ್ನು ಕಟ್ ಮಾಡಿ, "ಶ್ವಾಸದ ಮೇಲೆ ಗಮನ" ಇಟ್ಟರೆ ಆಲೋಚನೆಗಳು ನಿಂತು ಬಿಡುತ್ತವೆ, ಹಾಗೇ ಮನಸ್ಸು ಕೆಲಸ ಮಾಡದ ಸ್ಥಿತಿಯಲ್ಲಿ ನೀವು ಆತ್ಮದೊಡನೆ ಇರುತ್ತೀರಿ. ಅಂದರೆ ಆತ್ಮನನ್ನು ಆಶ್ರಯಿಸಿದಂತೆ.

ಸಂಗೀತದಲ್ಲಾಗಲಿ, ಗೈಡಿಂಗ್‌ನಲ್ಲಾಗಲಿ ಕಣ್ಣು ಮುಚ್ಚಿಕೊಳ್ಳುತ್ತೀರಿ, ಆಲೋಚನೆಗಳು ಬರುತ್ತವೆ, ಸಂಗೀತವಿಡುತ್ತಾರೆ, ಮನಸ್ಸು ಕೆಲಸ ಮಾಡುತ್ತದೆ. ಮನಸ್ಸಿನ ಬಳಿಯೇ ನಿಂತು ಬಿಡುತ್ತೀರಿ. ಗೈಡಿಂಗ್‌ನಲ್ಲಿಯೂ ಕೂಡಾ ಮನಸ್ಸಿನ ಬಳಿಯೇ ನಿಂತುಬಿಡುತ್ತೀರಿ. ಇನ್ನು ಯಾವ ರೀತಿಯ ಧ್ಯಾನದಲ್ಲಾದರೂ ಮನಸ್ಸಿನ ಬಳಿ ನಿಂತು ಬಿಡುತ್ತೀರಿ. ಆತ್ಮನನ್ನು ಆಶ್ರಯಿಸಲಾರಿರಿ. ಆದ್ದರಿಂದ ಅಷ್ಟು ಶ್ರೇಷ್ಠವಾದ ಬ್ರಹ್ಮವನ್ನು ಆಶ್ರಯಿಸುವ ಮಾರ್ಗವೇ ಈ "ಶ್ವಾಸದ ಮೇಲೆ ಗಮನ" ಧ್ಯಾನ.

ಇದನ್ನು ಅರ್ಥ ಮಾಡಿಕೊಂಡರೆ "ಶ್ವಾಸದ ಮೇಲೆ ಗಮನ"ದ ಹೊರತು ಇನ್ನೇನು ಮಾಡುವುದಿಲ್ಲ, ಒಂದು ರೀತಿಯಲ್ಲಿ ಹೇಳಬೇಕೆಂದರೆ ಈ ಸೀನಿಯರ್ ಮಾಸ್ಟರಗಳು ಅಂದುಕೊಳ್ಳುವವರೆಲ್ಲರಿಗೂ ಕೂಡಾ ಸತ್ಯದ ಬಗ್ಗೆ ತಿಳುವಳಿಕೆ ಇಲ್ಲ. ತಿಳುವಳಿಕೆ ಇದ್ದರೆ ಹಾಗೆ ಮಾತನಾಡರು, ಹಾಗೆ ಮಾಡಿಸಲಾರರು. ಅವರು ಸುಮ್ಮನೆ ಕಣ್ಣು ಮುಚ್ಚಿಸುತ್ತಾರೆಯೇ ಹೊರತು ಮನಸ್ಸನ್ನು ಮುಚ್ಚಿಸರು. ಮನಸ್ಸು ಮುಚ್ಚದ ಹೊರತು ಬ್ರಹ್ಮವು ಅರ್ಥವಾಗುವುದಿಲ್ಲ.

ಅದಕ್ಕೆ ಪ್ರತಿಯೊಬ್ಬರೂ ತಿಳಿದುಕೊಳ್ಳಿ, ಸೂರ್ಯನು, ಸಮಸ್ತ ಲೋಕಗಳು ಆ ಬ್ರಹ್ಮದಿಂದಲೇ ಪ್ರಕಾಶಿಸಲ್ಪಡುತ್ತಿವೆ. ಈ ಸೂರ್ಯನ ಪ್ರಕಾಶದಿಂದಲೇ ಮತ್ತೇ ಚಂದ್ರನು ಪ್ರಕಾಶಿಸುತ್ತಿದ್ದಾನೆ. ಭೂಮಿ ತನ್ನ ಸುತ್ತಾ ತಾನು ತಿರುಗುತ್ತಾ, ಸೂರ್ಯನ ಸುತ್ತಲೂ ತಿರುಗುತ್ತಾ ಇರುತ್ತದೆ. ಸೂರ್ಯನ ಕಡೆಗೆ ತಿರುಗಿದ ಭೂಮಿಯು ಹಗಲನ್ನು ಅನುಭವಿಸಿದರೆ, ಸೂರ್ಯನಕಾಂತಿ ಬೀಳದಿರುವಂತ ಭೂಮಿಯು ರಾತ್ರಿಯನ್ನು ಅನುಭವಿಸುತ್ತದೆ.

ಅಸಲು ಬ್ರಹ್ಮವೇ ಇಲ್ಲದಿದ್ದರೆ ಸೃಷ್ಟಿಯೇ ಇಲ್ಲ. ಪ್ರಪಂಚದಲ್ಲಿ ಎಷ್ಟೋ ಇವೆಯೆಂದು ಅಂದುಕೊಳ್ಳುತ್ತೇವೆಯಾಗಲಿ ಇರುವುದು ಆತನೇ ಬೇರೊಂದಿಲ್ಲ. ಆದ್ದರಿಂದ ಎಲ್ಲಾ ಆತನೆ ಒಳಗೊಳ್ಳುವಿಕೆಯಿಂದಲೇ ಸೃಷ್ಟಿಸಲ್ಪಟ್ಟಿದೆ, ಪ್ರಕಾಶಿಸಲ್ಪಡುತ್ತಿದೆ, ನಡೆಸಲ್ಪಡುತ್ತಿದೆ.

** ** **

**04**

**"ಸೂಕ್ಷ್ಮವಲ್ಲದ್ದು, ಸ್ಥೂಲವಲ್ಲದ್ದು, ಗಿಡ್ಡವಲ್ಲದ್ದು, ಉದ್ದವಲ್ಲದ್ದು, ಹುಟ್ಟಿಲ್ಲದ್ದು, ಬದಲಾವಣೆ ಇಲ್ಲದ್ದು, ರೂಪವಿಲ್ಲದ್ದು, ಗುಣವಿಲ್ಲದ್ದು, ಬಣ್ಣವಿಲ್ಲದ್ದು, ಹೆಸರಿಲ್ಲದ್ದು, ಯಾವುದೋ ಅದೇ ಬ್ರಹ್ಮವೆಂದು ಧ್ಯಾನಿಸು" ಎಂದಿದ್ದಾರೆ.**

ಇಲ್ಲಿ ಸೃಷ್ಟಿಗೆ ಮೂಲವಾದ, ಸೃಷ್ಟಿಗೆ ಆಧಾರವಾದ, ಸೃಷ್ಟಿಯನ್ನು ನಡೆಸುತ್ತಿರುವಂತ ಆ ಬ್ರಹ್ಮವನ್ನು ಧ್ಯಾನಿಸಿ ಎಂದಿದ್ದಾರೆ. ಆ ಬ್ರಹ್ಮವೊಂದರ ಲಕ್ಷಣಗಳನ್ನು ಅವರು ಹೇಳಿದ್ದಾರೆ. ಈ ಬ್ರಹ್ಮ ಸೂಕ್ಷ್ಮವೆಂದರೆ? ಸೂಕ್ಷ್ಮವಲ್ಲ, ಸೃಷ್ಟಿ ಎಲ್ಲಾ ಇದ್ದರೆ ಸೂಕ್ಷ್ಮವು ಹೇಗಾಯಿತು? ಸ್ಥೂಲವೂ ಅಂದರೆ? ಸ್ಥೂಲವೂ ಅಲ್ಲ. ಮತ್ತೇ ಒಂದು ಶರೀರದಲ್ಲಿರುವಂತಹ ಕಣಗಳಿಗಿಂತಲೂ ಕೂಡಾ ಕಾಣಿಸದಂತಹ ಸೂಕ್ಷ್ಮ ರೂಪದಲ್ಲಿ ಪ್ರತಿ ಶರೀರದಲ್ಲಿದೆ.

ಗಿಡ್ಡವಲ್ಲದ್ದು – ಅದೇನು ಗಿಡ್ಡದಾಗಿರುವುದಿಲ್ಲ

ಉದ್ದವಲ್ಲದ್ದು – ಉದ್ದವಾಗಿದೆಯೇ ಅಂದರೆ? ಉದ್ದವೂ ಅಲ್ಲ;

ಹುಟ್ಟು ಇಲ್ಲದ್ದು – ಯಾವುದಕ್ಕಾದರೂ, ಯಾರಿಗಾದರೂ ಹುಟ್ಟುತ್ತದೆಯೇ ಅಂದರೆ? ಯಾವುದಕ್ಕೂ ಹುಟ್ಟದು, ಯಾರಿಗೂ ಹುಟ್ಟದು, ಅಸಲು ಹುಟ್ಟೇ ಇಲ್ಲ.

ಬದಲಾವಣೆ ಇಲ್ಲದ್ದು–ಯಾವ ವಿಧವಾದ ಬದಲಾವಣೆ ಇಲ್ಲ. ಬಾಲ್ಯದಲ್ಲಿ ಒಂದು ರೀತಿಯಾಗಿ, ಯೌವ್ವನದಲ್ಲಿ ಒಂದು ರೀತಿಯಾಗಿ, ಮುಪ್ಪಿನಲ್ಲಿ ಒಂದು ರೀತಿಯಾಗಿ ಬದಲಾವಣೆ ಹೊಂದದು. ಆ ಬ್ರಹ್ಮಕ್ಕೆ ಬದಲಾಣೆ ಇಲ್ಲ. ಆದಿಯಲ್ಲೂ, ಮಧ್ಯದಲ್ಲೂ, ಅಂತ್ಯದಲ್ಲೂ ಕೂಡಾ ಹಾಗೆಯೇ ಇರುತ್ತದೆ. ಅಂದರೆ ಸೃಷ್ಟಿ ಏರ್ಪಡುವ ಮೊದಲು, ಸೃಷ್ಟಿ ಏರ್ಪಟ್ಟ ನಂತ, ಸೃಷ್ಟಿ ಅಂತ್ಯವಾದರೂ ಬದಲಾವಣೆ ಇರದು. ಈ ವಿಷಯವನ್ನು ಭಗವದ್ಗೀತೆಯಲ್ಲಿ 10ನೇ ಅಧ್ಯಾಯದಲ್ಲಿ 20ನೇ ಶ್ಲೋಕದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಹೇಳಿದ್ದಾನೆ

**ಶ್ಲೋಕ॥ ಅಹಮಾತ್ಮ ಗುಡಾಕೇಶ ಸರ್ವ ಭೂತಾಶಯ ಸ್ಥಿತಃ ॥**
**ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವಚ॥**

**(ಭ.ಗೀ. 10–20)**

ಅರ್ಜುನಾ ನಾನು ಆತ್ಮನು, ಸಮಸ್ತ ಭೂತಗಳಲ್ಲಿ ಸ್ಥಿತವಾಗಿ ಇದ್ದೇನೆ. ನಾನು ಈ ಸೃಷ್ಟಿ ಏರ್ಪಡುವ ಮೊದಲು ಇದ್ದೇನೆ, ಸೃಷ್ಟಿ ನಡೆಯುತ್ತಿರುವಾಗಲೂ ಇದ್ದೇನೆ, ಕೊನೆಗೆ ಈ ಸೃಷ್ಟಿ ಅಂತ್ಯವಾದರೂ ಕೂಡಾ ಇರುತ್ತೇನೆ ಎಂದಿದ್ದಾನೆ. ಆದ್ದರಿಂದ ಯಾವ ರೀತಿಯಾದ ಬದಲಾವಣೆ ಇಲ್ಲ. ಬಾಲ್ಯ, ಯೌವ್ವನ, ಕೌಮಾರ್ಯ, ವಾರ್ಧಕ್ಯ ಎನ್ನುವಂತಹ ಬದಲಾವಣೆಗಳು ಏನು ಇಲ್ಲ.

ರೂಪವಿಲ್ಲದದ್ದು–ಯಾವ ರೀತಿಯಾದ ರೂಪವಿಲ್ಲ. ಈ ರೂಪವೆಂದು ನಾವು ಹೇಳಿ ನಿರ್ಧರಿಸೋಣ ಎಂದರೆ ಅಸಲು ರೂಪವಿದ್ದರೆ ಅಲ್ಲವೆ? ಯಾವ ರೂಪವು ಇಲ್ಲ. ಆತನನ್ನು ಯಾವುದರಿಂದಲೂ ಹೋಲಿಸಲಾರೆವು. ಅದಕ್ಕೆ ಆತನ ಕುರಿತು ವರ್ಣಿಸುವುದು ಬಹಳ ಕಷ್ಟ ಎನ್ನುತ್ತಾರೆ ದೊಡ್ಡವರು.

ಮಾನವನ ಇಂದ್ರಿಯಗಳಿಂದ ಬ್ರಹ್ಮವನ್ನು ತಿಳಿದುಕೊಳ್ಳುವುದು ಅಸಾಧ್ಯ, ಅಸಂಭವ, ಲೋಕದಲ್ಲಿ ಎಲ್ಲಾ ಈ ಇಂದ್ರಿಯಗಳೊಂದಿಗೆ ಆತನನ್ನು ತಿಳಿದುಕೊಳ್ಳಬೇಕೆಂದು ಕೊಳ್ಳುತ್ತಾರೆ, ಈ ಕಣ್ಣುಗಳಿಂದ ನೋಡಬೇಕೆಂದು ಕೊಳ್ಳುತ್ತಾರೆ, ನಿಜವಾಗಿಯೂ ಈ ಮಾನವನ ಇಂದ್ರಿಯಗಳಿಗೆ ಆ ಶಕ್ತಿಯೇ ಇಲ್ಲ. ಜ್ಞಾನೇಂದ್ರಿಯಗಳಿಗೂ ಇಲ್ಲ, ಕರ್ಮೇಂದ್ರಿಯಗಳಿಗೂ ಇಲ್ಲ. ಅಂತರ್ ಇಂದ್ರಿಯವಾದ ಮನಸ್ಸಿಗೂ ಕೂಡಾ ಇಲ್ಲ.

ಕಣ್ಣಿಗೆ ಕಾಣಿಸದು, ಸ್ಪರ್ಶಿಸೋಣವೆಂದರೆ ಲಭ್ಯವಾಗದು, ಏನಾದರೂ ಕೇಳಿಸುತ್ತಿದೆಯೇ ಎಂದರೆ ಕೇಳಿಸದು. ಯಾರ ಮಾತುಗಳಿಂದಲಾದರೂ ಕೇಳೋಣವೆಂದರೆ ಅದೂ ಸಾಧ್ಯವಾಗದು. ಹೋಗಲಿ ಮನಸ್ಸಿನಿಂದ ತಿಳಿದುಕೊಳ್ಳೋಣವೆಂದರೆ ಮನಸ್ಸಿನಿಂದ ಕೂಡಾ ಆಗದು.

ಅದಕ್ಕೆ ಅನ್ನುತ್ತಾರೆ, ಆ ಪರ ಬ್ರಹ್ಮನನ್ನು ತಿಳಿದುಕೊಳ್ಳಬೇಕು ಅಂದರೆ, ಇಂದ್ರಿಯಾತೀತ ಸ್ಥಿತಿಗೆ ಸೇರಿಕೊಳ್ಳಬೇಕು. ಇಂದ್ರಿಯ ಸ್ಥಿತಿಯಲ್ಲಿ ಪರಬ್ರಹ್ಮನನ್ನು ತಿಳಿದುಕೊಳ್ಳುವುದು ಅಸಾಧ್ಯ, ಅಸಂಭವ. ಹಾಗಾದರೆ ಇಂದ್ರಿಯಾತೀತ ಸ್ಥಿತಿಗೆ ಅಂದರೆ ಇಂದ್ರಿಯಗಳು ಕೆಲಸ ಮಾಡದ ಸ್ಥಿತಿಗೆ ಹೇಗೆ ಹೋಗುತ್ತೇವೆ? ಆ ಮಾರ್ಗವೇ ಪತ್ರೀಜೀಯವರು ನಮಗೆ ಕೊಟ್ಟಿರುವ ಈ "ಶ್ವಾಸದ ಮೇಲೆ ಗಮನ" ಧ್ಯಾನ.

ಮೊದಲು ಧ್ಯಾನದಲ್ಲಿ ಕುಳಿತುಕೊಳ್ಳುವಾಗ ಕರ್ಮೇಂದ್ರಿಯಗಳನ್ನು, ಜ್ಞಾನೇಂದ್ರಿಯಗಳನ್ನು ಕೂಡಾ ಕಟ್ಟಿ ಹಾಕುತ್ತೇವೆ. ಅಂದರೆ ಕಾಲು, ಕೈಗಳನ್ನು ಕಟ್ಟುತ್ತೇವೆ. ಕಣ್ಣು, ಬಾಯಿ ಮುಚ್ಚುತ್ತೇವೆ. "ಶ್ವಾಸದ ಮೇಲೆ ಗಮನ"ವಿಟ್ಟು ಅಂತರೇಂದ್ರಿಯವಾದ

ಮನಸ್ಸನ್ನು ಕೂಡಾ ಕಟ್ಟಿ ಹಾಕುತ್ತೇವೆ. ಇಲ್ಲಿ ಮನಸ್ಸು ಕೆಲಸ ಮಾಡದ ಸ್ಥಿತಿಯಲ್ಲಿ ಆತ್ಮದೊಡನೆ ಇರುತ್ತೇವೆ. ಈಗ ಆ ಆತ್ಮ, ಆ ಬ್ರಹ್ಮವೆನ್ನುವುದು ಅನುಭೂತಿಗೆ ಬರುತ್ತಾ ಇರುತ್ತದೆ.

ಹಾಗೆ ಕೆಲವು ದಿನಗಳು, ಕೆಲವು ವರ್ಷಗಳು ಇರುವಂತೆ ಆದಾಗ ಯಾರಾದರೂ ಆತ್ಮಾನುಭೂತಿಯನ್ನು ಖಂಡಿತವಾಗಿ ಹೊಂದಿತೀರುತ್ತಾರೆ, ಅದರಲ್ಲಿ ಸಂಶಯವೇ ಇಲ್ಲ. ಆದರೆ ಈ ಗೈಡಿಂಗ್‌ಗಳು, ಮ್ಯೂಜಿಕ್‌ಗಳನ್ನು ಇಟ್ಟರೆ ಕಣ್ಣು ಮುಚ್ಚಿಕೊಳ್ಳುತ್ತಾರೆ, ಯಾರೋ ಮಾತುಗಳನ್ನಾಡುತ್ತಿದ್ದರೆ ಇಲ್ಲಾ ಸಂಗೀತವನ್ನು ಇಟ್ಟರೆ ಇವರು ಮನಸ್ಸಿನಿಂದ ಕೇಳುತ್ತಾ ಇರುತ್ತಾರೆ. ಇಲ್ಲಿ ಮನಸ್ಸು ಎಂದರೆ ಇಂದ್ರಿಯವು ಕೆಲಸ ಮಾಡುತ್ತದೆ. ಆದ ಕಾರಣ ಬ್ರಹ್ಮವನ್ನು ತಿಳಿದುಕೊಳ್ಳಲಾರರು, ಅಸಾಧ್ಯ. ಅದಕ್ಕೆ ಈ "ಶ್ವಾಸದ ಮೇಲೆ ಗಮನ"ವೇ ಬಹಳ ಉತ್ತಮವಾದುದೆಂದು ಹೇಳುವುದಕ್ಕೆ ಕಾರಣ.

ಆತನು ಅತೀಂದ್ರಿಯನು, ಇಂದ್ರಿಯಗಳಿಗೆ ಲಭ್ಯವಾಗನು. ಅತೀಂದ್ರಿಯ ಸ್ಥಿತಿಯಲ್ಲಿಯೇ ಆತನನ್ನು ದರ್ಶಿಸಬಲ್ಲೆವು. ಯಾವಾಗಾದರೆ ಇಂದ್ರಿಯಗಳನ್ನು ಕಟ್ಟಿ ಹಾಕಿ ತೀವ್ರವಾಗಿ ಸಾಧನೆ ಮಾಡುತ್ತೇವೆಯೋ, ಈ ಎರಡೂ ಕಣ್ಣುಗಳು ಕೆಲಸ ಮಾಡದಿದ್ದರೂ, ದಿವ್ಯ ನೇತ್ರ ಅಂದರೆ ಮೂರನೇ ಕಣ್ಣು ತೆರೆದುಕೊಳ್ಳುತ್ತದೆ. ಅದರ ಮೂಲಕ ಬ್ರಹ್ಮವನ್ನು ಅಂದರೆ ಆತ್ಮನನ್ನು ತಿಳಿಯಬಲ್ಲೆವು. ಅದಕ್ಕೆ ಆ ಶಕ್ತಿ ಇದೆ.

ಅದಕ್ಕೆ ನೀವು ನೋಡಿ, ಭಗವದ್ಗೀತೆಯಲ್ಲಿ ವಿಶ್ವರೂಪ ಸಂದರ್ಶನ ಯೋಗದಲ್ಲಿ ಅರ್ಜುನನಿಗೆ ಶ್ರೀಕೃಷ್ಣನು ತನ್ನ ನಿಜವಾದ ರೂಪವನ್ನು ತೋರಿಸುತ್ತಾನೆ. ಈಗ ನೀನು ಯಾವುದಾದರೆ ನೋಡುತ್ತಿರುವೆಯೋ ಅದು ನಾನು ಅಲ್ಲ. ನನ್ನ ನಿಜವಾದ ರೂಪವನ್ನು ತೋರಿಸುತ್ತೇನೆ ನೋಡು ಎಂದು ಹೇಳಿ ಆ ವಿಶ್ವರೂಪವನ್ನು ತೋರಿಸಿದನು. ಆಗ ಅರ್ಜುನನ್ನು ಆ ತೇಜಸ್ಸು, ಆ ಕಾಂತಿಯನ್ನು ನೋಡಲಾರದೆ ಹೋದನು, ಕಣ್ಣುಗಳು ಹೋದಂತೆ ಅನ್ನಿಸಿತು.

ಕೋಟಿಗಳ ಮೈಲು ದೂರದಲ್ಲಿ ಇದ್ದರೂ ಕೂಡಾ ಒಬ್ಬ ಸೂರ್ಯನ ಕಾಂತಿಯನ್ನೇ ನಾವು ನೋಡಲಾರದೆ ಹೋಗುತ್ತಿದ್ದೇವಲ್ಲಾ, ಮತ್ತೆ ಆ ಬ್ರಹ್ಮ ಅಂದರೆ ಆತ್ಮ ಅಂದರೆ ಕೋಟಿ ಸೂರ್ಯರ ಕಾಂತಿಯುಳ್ಳ ಬ್ರಹ್ಮನನ್ನು ಹೇಗೆ ನೋಡುತ್ತೀರಿ? ಅದಕ್ಕೆ ಅರ್ಜುನನು ಕೃಷ್ಣಾ ...... ನನ್ನಿಂದಾಗುತ್ತಿಲ್ಲ, ನಾನು ನೋಡಲಾರದೆ ಹೋಗುತ್ತಿದ್ದೇನೆ ಎಂದನು. ನೇತ್ರದಿಂದ ನೋಡಬಲ್ಲವನಾದ. ಆದ್ದರಿಂದ ಈ ಚರ್ಮ ಚಕ್ಷುಗಳಾಗಲಿ, ಮನೋಚಕ್ಷುಗಳಾಗಲಿ ಬ್ರಹ್ಮವನ್ನು ನೋಡಲಾರೆವು ಎಂದು ತಿಳಿದುಕೊಳ್ಳಬೇಕು.

ಬಣ್ಣವಿಲ್ಲದ್ದ –ಬಿಳಿ, ಕಪ್ಪು ಎಂಬುದು ಅಲ್ಲದ್ದು.

ಹೆಸರು ಇಲ್ಲದ್ದು – ಬ್ರಹ್ಮನಿಗೆ ಒಂದು ಹೆಸರು ಎಂಬುದು ಇಲ್ಲ.

ಅದಕ್ಕೆ ಯಾರಿಗೆ ಇಷ್ಟವಾದ ಹೆಸರುಗಳನ್ನು ಇಟ್ಟುಕೊಂಡು ಅವರು ಕರೆಯುತ್ತಿದ್ದಾರೆ. ಹಿಂದುಗಳು ಪರಬ್ರಹ್ಮ ಎನ್ನುತ್ತಾರೆ, ಮುಸ್ಲಿಂರು ಅಲ್ಲಾ ಎನ್ನುತ್ತಾರೆ, ಕ್ರೈಸ್ತರು ತಂಡ್ರಿ ಎನ್ನುತ್ತಾರೆ. ಹೀಗೆ ಒಬ್ಬೊಬ್ಬರು ಒಂದೊಂದು ಹೆಸರಿಟ್ಟುಕೊಂಡು ಆತನನ್ನೆ ಕರೆಯುತ್ತಾರೆ. ಈ ಹೆಸರುಗಳಲ್ಲಿ ವ್ಯತ್ಯಾಸವಿರುವುದರಿಂದ ಅವರ ದೇವರು ಬೇರೆ, ನಮ್ಮ ದೇವರು ಬೇರೆ ಎಂದುಕೊಳ್ಳುತ್ತಿದ್ದಾರೆ. ಹೆಸರುಗಳನ್ನು ಇವರು ಇಟ್ಟುಕೊಂಡಿದ್ದಾರಾಗಲಿ, ಆತನಿಗೆ ಅಸಲು ಹೆಸರೇ ಇಲ್ಲ.

ಗುಣವಿಲ್ಲ –ತಮೋಗುಣವೆಂದು, ರಜೋಗುಣವೆಂದು, ಸಾತ್ವಿಕ ಗುಣವೆಂದು ಮಾನವನಿಗೆ ಇರುತ್ತವೆಯಾಗಲಿ ಆತನಿಗೆ ಇಲ್ಲ.

ಹಾಗಾದರೆ ಅಂತಹ ಬ್ರಹ್ಮವನ್ನು, ಅಂತಹ ಶ್ರೇಷ್ಠನಾದವನನ್ನು ಧ್ಯಾನಿಸು ಎಂದು ಹೇಳಿದ್ದಾರೆ. ಶಂಕರಾಚಾರ್ಯರು, ಧ್ಯಾನ ಮಾಡುವುದು ಅಂದರೆ ಗಮನ ಇಡುವುದು. ನೀವು ಯಾವುದೇ ಮೇಲೆ ಗಮನವಿಟ್ಟರೆ ಆ ಗಮನದಲ್ಲಿಯೇ ಇದ್ದಂತೆ. ನೀವು ಸಂಗೀತ ಕೇಳುತ್ತಾ ಇದ್ದರೆ, ಅದು ಸಂಗೀತದ ಮೇಲೆ ಗಮನ, ಮಾತುಗಳನ್ನು ಕೇಳುತ್ತಾ ಇದ್ದರೆ, ಮಾತುಗಳ ಮೇಲೆ ಗಮನ, ಮಂತ್ರವನ್ನು ಜಪಿಸುತ್ತಿದ್ದರೆ ಅದು ಜಪದ ಮೇಲೆ ಗಮನ, ನಾಮವನ್ನು ಅಂದರೆ ಹೆಸರುಗಳನ್ನು ಹೇಳುತ್ತಾ ಇದ್ದರೆ ಹೆಸರಿನ ಮೇಲೆ ಗಮನ.

ಇವುಗಳ ಮೇಲೆ ಗಮನವಿಟ್ಟರೆ ಬ್ರಹ್ಮವನ್ನು ಏನು ಹೊಂದ ಬಲ್ಲವು ಕಣ್ರೀ!. ಆದ್ದರಿಂದ ಶಂಕರಾಚಾರ್ಯರು ಸ್ಪಷ್ಟವಾಗಿ ಹೇಳಿದ್ದಾರೆ. ಇಂತಹುದು ಯಾವುದಾದರೆ ಇದೆಯೋ ಅದೇ ಬ್ರಹ್ಮವು, ಅದನ್ನೇ ಧ್ಯಾನಿಸು ಎಂದಿದ್ದಾರೆ. ನಿಜವಾಗಿ ಶಂಕರಾಚಾರ್ಯರು ಈ ಬ್ರಹ್ಮದ ಕುರಿತು ಹೇಳಿದ ಪ್ರತಿ ವಿಷಯವನ್ನು ಬಹಳ ಆಳವಾಗಿ ನಾವು ಅರ್ಥ ಮಾಡಿಕೊಂಡರೆ 'ಶ್ವಾಸದ ಮೇಲೆ ಗಮನ'ದ ಹೊರತು ಇನ್ನೇನೂ ಮಾಡರು.

ಧ್ಯಾನ ಎಂದರೆ ಸಾಕ್ಷಾತ್ ಭಗವಂತನ ಮೇಲೆ ದೃಷ್ಟಿಯಿಡುವುದು. ನಾವೆಲ್ಲಾ ಆ ಕೆಲಸವನ್ನೇ ಮಾಡುತ್ತಿದ್ದೇವೆ. ಮತ್ತೇ ನಮ್ಮ ಸೊಸೈಟಿಯಲ್ಲಿ ದೊಡ್ಡ ದೊಡ್ಡ ಮಾಸ್ಟರ್‌ಗಳೇ ಸಂಗೀತವಿಟ್ಟು ಮಾಡಿಸುತ್ತಿದ್ದಾರೆ, ಸಂಗೀತವನ್ನು ಸಮರ್ಥಿಸುತ್ತಿದ್ದಾರೆ. ಪತ್ರೀಜಿಯವರು ಮಾಡಿಸಿದ್ದಾರಲ್ಲಾ! ಎನ್ನುತ್ತಾರೆ. ಹೀಗೆ ಏನೋ ಒಂದು ನೆಪ ಹೇಳಿ ಬ್ರಹ್ಮವನ್ನು ಹಿಡಿದುಕೊಳ್ಳದೇ ಎಲ್ಲವನ್ನು ಹಿಡಿದುಕೊಳ್ಳುತ್ತಿದ್ದಾರೆ.

ಹಣ ಬೇಕಾದವರು ಮನಿ ಮೆಡಿಟೇಷನ್ ಮಾಡುತ್ತಿದ್ದಾರೆ. ರೋಗಗಳು ವಾಸಿಯಾಗಬೇಕೆಂದು ಕೊಂಡವರು ಸಂಕಲ್ಪವಿಟ್ಟು ಧ್ಯಾನವನ್ನು ಮಾಡುತ್ತಿದ್ದಾರೆ. ಹೀಗೆ ಯಾರಿಗೆ ಇಷ್ಟ ಬಂದಂತೆ ಆ ರೀತಿಯಲ್ಲಿ ಅವರು ಮಾಡುತ್ತಿದ್ದಾರೆ. ಆದರೆ

ಶಂಕರಾಚಾರ್ಯರು ಆ ಬ್ರಹ್ಮವೊಂದರ ಲಕ್ಷಣಗಳನ್ನು ಹೇಳಿ, ಆತನನ್ನೇ ಧ್ಯಾನಿಸು ಎಂದಿದ್ದಾರೆ.

ಅದೇನು ಸೂಕ್ಷ್ಮವಲ್ಲ, ಸ್ಥೂಲವಲ್ಲ, ಗಿಡ್ಡವಲ್ಲ, ಉದ್ದವಲ್ಲ, ಹುಟ್ಟೂ ಇಲ್ಲ, ಬದಲಾವಣೆ ಇಲ್ಲ, ರೂಪವಿಲ್ಲ, ಗುಣವಿಲ್ಲ, ಬಣ್ಣವಿಲ್ಲ, ನಾಮ (ಹೆಸರು) ಇಲ್ಲ ಎಂದಿದ್ದಾರೆ. ನಾವು ಆತನನ್ನು ಗುರುತು ಹಿಡಿಯುವುದಕ್ಕಾಗಿ, ತಿಳಿದುಕೊಳ್ಳುವುದಕ್ಕಾಗಿ ಎಷ್ಟು ಲಕ್ಷಣಗಳನ್ನು ಹೇಳಿದ್ದಾರೋ ನೋಡಿ.

ನಿಜವಾಗಿ ಬಹಳ ಜನರಿಗೆ ಬ್ರಹ್ಮನ ಕುರಿತು ಹೇಳುತ್ತಿದ್ದರೆ ಆಸಕ್ತಿ ಇರದು. ಭೌತಿಕವಾದ ಲಾಭಗಳನ್ನೇನಾದರೂ ಹೇಳಿದರೆ ಮಾತ್ರ ಬಹಳ ಆಸಕ್ತಿ ಇರುತ್ತದೆ. ಆದ್ದರಿಂದ ಯಾವಾಗಲೂ ಬ್ರಹ್ಮನ ದೃಷ್ಟಿಯಲ್ಲಿರುವವರು ಬ್ರಹ್ಮವನ್ನೇ ಹೊಂದುತ್ತಾರೆ, ತರತರದ ದೃಷ್ಟಿಯಲ್ಲಿರುವವರು ವಿವಿಧ ರೀತಿಯಾಗಿದ್ದವನ್ನು ಹೊಂದುತ್ತಾ ಇರುತ್ತಾರೆ.

ಅದಕ್ಕೆ ಯೋಗವಾಶಿಷ್ಟದಲ್ಲಿಯಾಗಲೀ, ಭಗವದ್ಗೀತೆಯಲ್ಲಾಗಲೀ ಯಾವುದು ಮಹತ್ವವಾದದ್ದೋ ತಿಳಿದುಕೊಂಡು ಅದನ್ನೇ ಧ್ಯಾನಿಸು ಎಂದಿದ್ದಾರೆ. ಈ ಸೃಷ್ಟಿಯಲ್ಲಿ ಮಹತ್ವವಾದದ್ದು ಏನಿದೆ? ಒಬ್ಬ ಬ್ರಹ್ಮನ ಹೊರತು ಇನ್ನೇನು ಇಲ್ಲ ಮತ್ತೆ ನಾವೆಲ್ಲಾ "ಶ್ವಾಸದ ಮೇಲ ಗಮನ"ದ ಮೂಲಕ ಆ ಬ್ರಹ್ಮನ ಮೇಲೆಯೇ ಗಮನವಿಡುತ್ತಿದ್ದೇನೆ.

**ಶ್ಲೋಕ॥ ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪ ಮೇಧಸಾಮ್।**

**ದೇವಾನ್ದೇವಯಜೋಯಾಂತಿ ಮದ್ಭಕ್ತಾಯಾಂತಿ ಮಾಮಪಿ॥**

**(ಭ.ಗೀ.7–23)**

ತಾತ್ಪರ್ಯ: ಈ ಅಲ್ಪ ಜ್ಞಾನವುಳ್ಳ ಜನರು ಹೊಂದುವ ಫಲವು ತಾತ್ಕಾಲಿಕವಾದದ್ದು ದೇವತೆಗಳನ್ನು ಆಧಾರಿಸುವವರು ಆಯಾ ದೇವತೆಗಳ ಲೋಕಕ್ಕೆ ಹೋಗುತ್ತಾರೆ. ನನ್ನ ಭಕ್ತರು ಮಾತ್ರ ನನ್ನನ್ನೇ ಸೇರಿಕೊಳ್ಳುತ್ತಾರೆ.

ಯೋಗವಾಶಿಷ್ಠದಲ್ಲಿ

**ಶ್ಲೋಕ॥ ದೇವನ್ದೇ ವರುಚೋಯಾನ್ತಿ ಯಕ್ಷಾ ಯಕ್ಷಾ ಶ್ರವಜನ್ತಿಹಿ**

**ಬ್ರಹ್ಮ ಬ್ರಹ್ಮಯಜೋಯಾನ್ತಿ ಯದಮಚ್ಚಂ ತಥಾ ಪ್ರಯೇತ್**

ತಾತ್ಪರ್ಯ: ದೇವತೆಗಳನ್ನು ಧ್ಯಾನಿಸುವವರು ದೇವತೆಗಳನ್ನೇ ಹೊಂದುತ್ತಾರೆ. ಯಕ್ಷರನ್ನು ಧ್ಯಾನಿಸುವವರು ಯಕ್ಷರನ್ನೇ ಹೊಂದುತ್ತಾರೆ. ಹಾಗೆಯೇ ಬ್ರಹ್ಮವನ್ನು ಧ್ಯಾನಿಸುವವರು ಬ್ರಹ್ಮವನ್ನು ಹೊಂದುತ್ತಾರೆ. ಆದಕಾರಣ ಯಾವುದು ಮಹತ್ತರವಾದದ್ದೊ ಅದನ್ನೇ ಹೊಂದುವುದಕ್ಕೆ ಪ್ರಯತ್ನಿಸಬೇಕು.

ಆದ್ದರಿಂದ ಬ್ರಹ್ಮಕ್ಕಿಂತ ಮಹತ್ತರವಾದದ್ದು ಇಲ್ಲ. ಆದ್ದರಿಂದ ಬ್ರಹ್ಮವನ್ನು ಹೊಂದುವ ಪ್ರಯತ್ನವನ್ನು ಮಾಡಬೇಕು. ಅಂದರೆ ಆತ್ಮನನ್ನು ಹೊಂದುವ ಪ್ರಯತ್ನವನ್ನು ಮಾಡಬೇಕು. ಆ ಮಾರ್ಗವೇ ಪತ್ರಿಜೀ ಕೊಟ್ಟಿರುವ "ಶ್ವಾಸದ ಮೇಲೆ ಗಮನ" ಧ್ಯಾನ.

ಆದ ಕಾರಣ "ಶ್ವಾಸದ ಮೇಲೆ ಗಮನ"ವಿಟ್ಟು ಧ್ಯಾನ ಮಾಡಿರಿ, ಬ್ರಹ್ಮವನ್ನು ಹೊಂದಿರಿ.

** ** **

**05**

## "ಹಾಲಿನಲ್ಲಿ ಬೆಣ್ಣೆಯು ಸರ್ವತ್ರಾ ವ್ಯಾಪಿಸಿದೆ. (ಅಂದರೆ ಹಾಲಿನಲ್ಲೆಲ್ಲಾ) ಹಾಗೆಯೇ ಬ್ರಹ್ಮವು ಸರ್ವ ವ್ಯಾಪಕವಾಗಿದೆ. ಆದ್ದರಿಂದ ಸಮಸ್ತವಾದ ವಸ್ತುಗಳೆಲ್ಲಾ ಆ ಪರಬ್ರಹ್ಮನಿಂದಲೇ ಪರಿವ್ಯಾಪ್ತವಾಗಿ ಇವೆ. ಆ ಪರಬ್ರಹ್ಮನಿಂದಲೇ ಕೆಲಸಗಳೆಲ್ಲವು ನಡೆಯುತ್ತಿವೆ"

ಶಂಕರಾಚಾರ್ಯರು ಬ್ರಹ್ಮನು ಎಲ್ಲಿದ್ದಾನೆ ಎಂಬುದಕ್ಕೆ ಏನೆಂದು ಹೇಳಿದ್ದಾರೆಂದರೆ? ಹಾಲಿನಲ್ಲಿ ಬೆಣ್ಣೆಯು ಎಲ್ಲಾ ಕಡೆ ವ್ಯಾಪಿಸಿದೆ. ನೀವು ಗಡಿಗೆಯಲ್ಲಿ ಹಾಲನ್ನು ತೆಗೆದುಕೊಂಡರೆ ಮೇಲೆ ಬೆಣ್ಣೆಯೇನು ಕಾಣಿಸದು. ಆದರೆ, ಅದನ್ನು ಕಡೆದರೆ ಬೆಣ್ಣೆಯು ಮೇಲೆ ಬರುತ್ತದೆ. ಅಂದರೆ ಆ ಹಾಲಿನಲ್ಲಿ ಬೆಣ್ಣೆ ಕಾಣಿಸದಿದ್ದರೂ ಒಟ್ಟಾರೆ ಬೆಣ್ಣೆ ಇದೆ. ಸ್ವಲ್ಪ ಮಥಿಸಿದರೆ ಮೇಲೆ ಬರುತ್ತದೆ.

ಆ ಹಾಲಿನಲ್ಲಿ ಈ ಬೆಣ್ಣೆ ಎಲ್ಲಿದೆ? ಯಾವುದೋ ಒಂದು ಕಡೆಯಲ್ಲೋ, ಮೇಲೆಯೋ, ಕೆಳಗೋ ಅಲ್ಲ, ಎಲ್ಲಡೆ ವ್ಯಾಪಿಸಿದೆ. ಹಾಲಿನ ಯಾವ ಭಾಗವನ್ನು ತೆಗೆದುಕೊಂಡರೂ ಆ ಭಾಗದಲ್ಲಿದೆ. ಹಾಗೆಯೇ ಬ್ರಹ್ಮವೆಂದರೆ ಭಗವಂತನು ಈ ಸೃಷ್ಟಿಯೆಲ್ಲಾ ಸರ್ವ ವ್ಯಾಪಕವಾಗಿದ್ದಾನೆ. ಎಲ್ಲೆಡೆಯೂ ಇದ್ದಾನೆ. ಎಲ್ಲಿ ಇಲ್ಲಾ? ಯಾವ ಭಾಗದಲ್ಲಿ ಇಲ್ಲ? ಚೆನ್ನಾಗಿರುವುದರಲ್ಲಿ ಇದ್ದಾನೆ, ಚೆನ್ನಾಗಿಲ್ಲದರಲ್ಲಿಯೂ ಇದ್ದಾನೆ. ಆತನು ಇಲ್ಲದ್ದಂತೂ ಯಾವುದೂ ಇಲ್ಲ.

ಇದನ್ನು ಅರ್ಥ ಮಾಡಿಕೊಳ್ಳಬೇಕೆಂದೇ ಒಬ್ಬ ಗುರುವು ತನ್ನ ಶಿಷ್ಯರಿಗೆ ಈ ಆಧ್ಯಾತ್ಮಿಕ ಬೋಧನೆಯನ್ನು ಮಾಡುತ್ತಾ ..... ಅವರು ಎಲ್ಲಿಯವರೆಗೆ ಕಲಿತ್ತಿದ್ದಾರೆಂದು ತಿಳಿದುಕೊಳ್ಳುವುದಕ್ಕೆ, ಅವರನ್ನು ಪರೀಕ್ಷಿಸುವದಕ್ಕೆ ಆ ನಾಲ್ವರು ಶಿಷ್ಯರನ್ನು ಕರೆದರು. ಕರೆದು ಏನೆಂದು ಹೇಳಿದರೆಂದರೆ, ಅವರಿಗೆ ಒಂದೊಂದು ಬಾಳೆ ಹಣ್ಣನ್ನು ಒಬ್ಬೊಬ್ಬರಿಗೆ ಕೊಟ್ಟು, ಇದನ್ನು ಯಾರೂ ನೋಡದಂತೆ ತಿಂದು ಬರಬೇಕು ಎಂದರು.

ಸರಿ ಎಂದು ನಾಲ್ವರು ಹೋದರು. ಒಬ್ಬನು ಕತ್ತಲಾಗಿರುವ ಒಂದು ಗುಹೆಯೊಳಗೆ ಹೋದನು. ಇಲ್ಲಿ ಯಾರೂ ಇಲ್ಲವೆಂದು ಹೇಳಿ ಅಲ್ಲಿ ತಿಂದನು. ಇನ್ನೊಬ್ಬ ಬಯಲಿನಲ್ಲಿ ಸುತ್ತಲೂ ನೋಡಿ ಅಲ್ಲಿ ಯಾರು ಇಲ್ಲವೆಂದು ಅಲ್ಲಿ ತಿಂದನು. ಇನ್ನೊಬ್ಬನು ಮನೆಯಲ್ಲಿ ಬಾಗಿಲು ಹಾಕಿ ಯಾರೂ ಇಲ್ಲವೆಂದು ನಿರ್ಧಾರ ಮಾಡಿಕೊಂಡು ತಿಂದನು. ಆದರೆ ನಾಲ್ಕನೆಯವನು ತಿನ್ನದೇ ವಾಪಸ್ಸು ತಂದನು.

ನಂತರದ ದಿನ ಗುರುಗಳು ತಿಂದಿರಾ ಎಂದು ಕೇಳಿದರು. ಆಗ ಗುರುಗಳ ಬಳಿ ಹೋಗಿ ನಾನು ಅಲ್ಲಿ ತಿಂದೆನು, ನಾನು ಇಲ್ಲಿ ತಿಂದೆನು ಎಂದು ಒಬ್ಬೊಬ್ಬರು ಒಂದೊಂದು ಕಡೆ ತಿಂದೆವೆಂದು ಹೇಳಿದರು. ಆದರೆ ಒಬ್ಬನು ತಿಂದಿಲ್ಲ. ಏಕೆ ತಿನ್ನಲಿಲ್ಲ ಎಂದು ಕೇಳಿದರೆ ನೀವೇ ಹೇಳಿದ್ದೀರಲ್ಲಾ ಗುರುಗಳೇ, ಭಗವಂತನು ಸರ್ವವ್ಯಾಪಿ, ಆತನು ಎಲ್ಲ ಕಡೆ, ಎಲ್ಲದರಲ್ಲೂ ಇದ್ದಾನೆಂದು. ಆತನು ಇಲ್ಲದ ಸ್ಥಳ ಎಲ್ಲಿಯೂ ಇಲ್ಲದಾಗ ಎಲ್ಲೆಂದು ತಿನ್ನಲಿ? ಅದಕ್ಕೆಂದೇ ನಾನು ತಿನ್ನಲಾರದೆ ಹೋದೆ ಎಂದನು.

ಆಗ ಗುರುಗಳು ನಾನು ಹೇಳಿರುವಂತ ಸಂದೇಶವನ್ನು ನೀನು ಅರ್ಥ ಮಾಡಿಕೊಂಡಿರುವೆ ಎಂದು ಅವನನ್ನು ಪ್ರಶಂಸಿಸಿದರು.

ನಿಜವಾಗಿಯೂ ಸರಿಯಾದ ಭಕ್ತರು ಯಾರು ಎಂದರೆ? ಭಗವಂತನೊಬ್ಬನ ಇರುವಿಕೆಯನ್ನು ತಿಳಿದುಕೊಂಡವರೇ ಸರಿಯಾದ ಭಕ್ತರು. ನೀವು ಗಮನಿಸಿದರೆ ಬಹಳಷ್ಟು ಜನರು ಗುಡಿಗಳಿಗೆ ಹೋದಾಗ ಬಹಳ ಪವಿತ್ರವಾಗಿರುತ್ತಾರೆ. ಅವರ ಮಾತುಗಳಾಗಲಿ, ಕೆಲಸಗಳಾಗಲಿ, ಎಲ್ಲಾ ಬಹಳ ಭಿನ್ನವಾಗಿರುತ್ತವೆ. ಆದರೆ ಹೊರಗೆ ಹೋದ ಮೇಲೆ ಆ ರೀತಿಯಾದ ಪಾವಿತ್ರ್ಯತೆ ಕಾಣಿಸದು. ಕೇಕೆ ಹಾಕುತ್ತಾರೆ, ಬಯ್ಯುತ್ತಾರೆ, ವಿಮರ್ಶಿಸುತ್ತಾರೆ, ಎಷ್ಟೋ ಮಾಡುತ್ತಾರೆ. ಆದರೆ ಅವರ ಉದ್ದೇಶ ದೇವರು ಗುಡಿಯಲ್ಲಿಯೇ ಇದ್ದಾನೆಂದು. ಸರ್ವತ್ರ ಇರುವ ದೇವರು ಎಲ್ಲೆಡೆಯೂ ಇರುವಾಗ ಎಲ್ಲಿ ಇಲ್ಲ!.

ಆತನು ಎಲ್ಲೆಡೆಯೂ ಇರುವಾಗ, ಎಲ್ಲಾ ಕಡೆಯೂ ಪವಿತ್ರವಾಗಿರಬೇಕು. ಅಷ್ಟೇ ಹೊರತು ಒಂದು ಕಡೆ ಪವಿತ್ರವಾಗಿ ಇದ್ದು, ಇನ್ನೊಂದು ಕಡೆ ಪವಿತ್ರವಾಗಿ ಇಲ್ಲದಿದ್ದರೆ ಭಗವಂತನನ್ನು ನೀವು ಏನು ಅರ್ಥ ಮಾಡಿಕೊಂಡಂತೆ?

ಹಾಗೆಯೇ ಆ ವಿಗ್ರಹದ ಬಳಿಗೆ ಹೋಗಿ ನಮಸ್ಕಾರ ಮಾಡಿಕೊಂಡು ಕೋರಿಕೆಗಳನ್ನು ಹೇಳಿಕೊಳ್ಳುತ್ತಾರೆ. ಅಂದರೆ ಅವರ ಉದ್ದೇಶ, ದೇವರು ವಿಗ್ರಹದಲ್ಲಿಯೇ ಇದ್ದಾನೆಂದು. ಮತ್ತೇ ವಿಗ್ರಹದಲ್ಲಿಯೇ ಇದ್ದಾನಾ? ಇನ್ನೆಲ್ಲಿಯೂ ಇಲ್ಲವೇ?. ಯಾವುದರಲ್ಲಿ ಇಲ್ಲ ಆಲೋಚಿಸಿರಿ! ಇದು ಅರ್ಥವಾದರೆ ಎಲ್ಲಿ ಹೇಳಿಕೊಂಡರೂ ಆತನಿಗೆ ತಿಳಿಯುತ್ತದೆ ಎಂಬುದು ಅರ್ಥವಾಗುತ್ತದೆ.

ಅದಕ್ಕೆ ಭಗವಂತನೆಂದರೆ ಇಷ್ಟವಿರುವವರು ಯಾರಾದರೂ ಸರಿ ಮೊದಲು

ಭಗವಂತನ ಕುರಿತು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಭಗವಂತನ ಕುರಿತು ತಿಳಿದುಕೊಳ್ಳದೇ ಇವರು ಎಷ್ಟು ರೀತಿಯ ಆರಾಧನೆಗಳನ್ನು ಮಾಡಿದರೂ ಏನು ಪ್ರಯೋಜನವಿಲ್ಲ. ಅಸಲು ಭಗವಂತನ ಕುರಿತು ಅರ್ಥವಾಗದಿದ್ದರೆ ಇವರು ಮಾಡುವ ಕೆಲಸಗಳೇ ಬಹಳ ವಿಚಿತ್ರವಾಗಿ ಇರುತ್ತವೆ.

ಅದಕ್ಕೆ ಶಂಕರಾಚಾರ್ಯರು, ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಹಾಲಿನಲ್ಲಿ ಬೆಣ್ಣೆ ಎಲ್ಲೆಡೆ ವ್ಯಾಪಿಸಿರುತ್ತದೆ, ಹಾಗೆಯೇ ಬ್ರಹ್ಮವು ಸರ್ವ ವ್ಯಾಪಕವಾಗಿದೆ. ಭಗವಂತನು ಎಲ್ಲಡೆಯು, ಅಣುವಣುವಿನಲ್ಲೂ ಇದ್ದಾನೆ.

ಭಗವಂತನು ಎಲ್ಲಡೆಯೂ ಇದ್ದಾನೆ ಎಂದು ಹೇಳಿದರೆ! ಇದ್ದರೆ ಏಕೆ ಕಾಣಿಸುತ್ತಿಲ್ಲ? ನಾನು ಗುಡ್ಡವನ್ನು ನೋಡಿದೆ, ನನಗೆ ಕಾಣಿಸುತ್ತಿಲ್ಲ, ಆ ಗಿಡವನ್ನು ನೋಡಿದ ನನಗೆಕಾಣಿಸುತ್ತಿಲ್ಲವೆಂದು ಮಾತನಾಡುತ್ತಾರೆ. ನೀವು ಗಮನಿಸಿದರೆ ಹಾಲಿನಲ್ಲಿ ಬೆಣ್ಣೆ ಇದ್ದರೂ ಆ ಹಾಲನ್ನು ಕಡೆದರೇನೇ ಬೆಣ್ಣೆ ಹೇಗೆ ಹೊರ ಬರುತ್ತದೋ, ನಿಮ್ಮ ಶರೀರದಲ್ಲಿ ಇರುವಂತ ಆ ಭಗವಂತನನ್ನು ನೀವು ದರ್ಶಿಸಬೇಕೆಂದರೆ ಸಾಕ್ಷಾತ್ಕರಿಸಿಕೊಳ್ಳಬೇಕೆಂದರೆ ಹಾಲನ್ನು ಮಥಿಸಿದಂತೆ, “ಶ್ವಾಸದ ಮೇಲೆ ಗಮನ”ವಿಟ್ಟು ತೀವ್ರ ಸಾಧನೆ ಮಾಡಬೇಕು. ಆಗ ಆತನು ನಿಮಗೆ ದರ್ಶನವನ್ನು ಕೊಡುತ್ತಾನೆ.

ಅಂದರೆ ನಾವು ಸ್ವಲ್ಪ ಶ್ರಮಪಟ್ಟರೇನೇ, ಹಾಲಿನಿಂದ ಬೆಣ್ಣೆ ಲಭಿಸಿದಂತೆ, ಈ ಸಾಧನೆಯಲ್ಲಿ ಕಷ್ಟಪಟ್ಟರೆ ಭಗವಂತನು ನಿಮಗೆ ಲಭಿಸುತ್ತಾನೆ. ಮತ್ತೆ ಅದಕ್ಕಾಗಿಯೇ ಭೀಮವರಂಗೆ ಬನ್ನಿರೆನ್ನುವುದು. ಆತನು ಯಾರಲಿಲ್ಲ? ಎಲ್ಲರಲ್ಲೂ ಇದ್ದಾನೆ. ಎಲ್ಲರೊಳಗೆ ನೀವು ಹೋಗಲಾರಿರಿ. ಆದರೆ ನಿಮ್ಮೊಳಗೆ ನೀವು ಹೋಗಬಲ್ಲಿರಿ, ಎಲ್ಲರಲ್ಲಿ ಇರುವ ಭಗವಂತನನ್ನು ನೀವು ದರ್ಶಿಸಲಾರಿರಿ. ನಿಮ್ಮೊಳಗೆ ಹೋಗಿ ಆತನನ್ನು ದರ್ಶಿಸಬಲ್ಲ ಮಾರ್ಗವೇ ಈ “ಶ್ವಾಸದ ಮೇಲೆ ಗಮನ” ಧ್ಯಾನ.

ಕಟ್ಟಿಗೆಯಲ್ಲಿ ಅಗ್ನಿ ಇದೆ. ಕಾಣಿಸುತ್ತದೆಯೇ ಅಂದರೆ? ಕಾಣಿಸದು. ಮತ್ತೇ ಯಾವಾಗ ಕಾಣಿಸುತ್ತದೆ? ಅದನ್ನು ಕೂಡಾ ಮಥಿಸಿದರೆ ಅಗ್ನಿ ಹುಟ್ಟುತ್ತದೆ. ಬ್ರಾಹ್ಮಣರು ಯಜ್ಞಗಳನ್ನು, ಯಾಗಗಳನ್ನು ಮಾಡಿದಾಗ ಹಾಗೆಯೇ ಆ ಚಕ್ಕೆಯನ್ನು ಮಥಿಸಿ ಅಗ್ನಿಯನ್ನು ಹುಟ್ಟಿಸುತ್ತಾರೆ. ಅದು ಮಥಿಸದೇ ಆ ಚಕ್ಕೆಯಲ್ಲಿರುವ ಅಗ್ನಿಯು ಹೇಗೆ ಕಾಣಿಸದೋ, ಹಾಲನ್ನು ಕಡೆಯದಿದ್ದರೆ ಬೆಣ್ಣೆ ಹೇಗೆ ಕಾಣಿಸದೋ, ಧ್ಯಾನ ಮಾಡದಿದ್ದರೆ ಶರೀರದಲ್ಲಿರುವ ಭಗವಂತನನ್ನು ಯಾರೂ ದರ್ಶಿಸಲಾರರು.

ಎಲ್ಲಿದ್ದಾನೆ ಎನ್ನುತ್ತಾರೆ? ನೀನು ಧ್ಯಾನ ಮಾಡು, ಮಾಡಿದರೆ ನಿನಗೆ ಲಭಿಸುತ್ತಾನೆ. ಈ ಸತ್ಯವನ್ನು ತಿಳಿಯದವರು ಅವರು ಮಾಡುವ ಕೆಲಸಗಳು ವಿಚಿತ್ರವಾಗಿಯೂ,

ಹಾಸ್ಯಾಸ್ಪದವಾಗಿಯೂ ಇರುತ್ತವೆ. ಇದನ್ನು ನಾವು ಗಮನಿಸಿದರೆ ಚೆನ್ನಾಗಿ ಅರ್ಥವಾಗುತ್ತದೆ.

ನೀವು ಗಮನಕೊಡಿ, ಮೈಕುಗಳನ್ನಿಟ್ಟು, ದೊಡ್ಡ ದೊಡ್ಡ ಶಬ್ಧಗಳನ್ನು ಇಟ್ಟು ಹಾಡುಗಳನ್ನು ಹಾಡುತ್ತಾರೆ. ಏಕೆಂದರೆ? ಭಗವಂತನಿಗಾಗಿ ಎನ್ನುತ್ತಾರೆ. ಮತ್ತೇ ಎಲ್ಲೆಡೆಯೂ ಇರುವ ಅತನಿಗೆ ಕೇಳಿಸದೇ? ಅಂದರೆ ಏಕೆ ಕೇಳಿಸದು? ಭಗವಂತನ ಕುರಿತು ಚೆನ್ನಾಗಿ ಆರ್ಥ ಮಾಡಿಕೊಂಡವರಿಗೆ ಇನ್ನೂ ಏನು ಅರ್ಥವಾಗುತ್ತದೆ ಎಂದರೆ, ಬಹಳಷ್ಟು ಜನ ಕಷ್ಟಗಳು ಬಂದರೆ ಕೋರಿಕೊಳ್ಳುತ್ತಾರೆ. ನಮಗೆ ಈ ಕಷ್ಟವು ಬಂದಿದೆ, ಈ ಕಷ್ಟದಿಂದ ಹೊರಬರುವಂತೆ ಮಾಡು ಎಂದು. ಸ್ವಲ್ಪ ಆಲೋಚಿಸಿರಿ! ಈ ಶರೀರವನ್ನೆಲ್ಲಾ ಭಗವಂತನು ವ್ಯಾಪಿಸಿರುವಾಗ ನಿಮಗೆ ಬಂದಿರುವ ಕಷ್ಟದ ಕುರಿತು ಆತನಿಗೆ ತಿಳಿಯದೆ! ಮತ್ತೆ ಪ್ರತ್ಯೇಕಿಸಿ ಏಕೆ ಹೇಳುವುದು? ಆತನು ತಿಳಿದುಕೊಳ್ಳಲಾರನೇ? ನೀವು ಹೇಳಿಕೊಂಡಿದ್ದೀರಿ ಎಂದರೆ ಭಗವಂತನ ಕುರಿತು ಇನ್ನೂ ಅರ್ಥವಾಗಿಲ್ಲ ಎಂದು ಅರ್ಥ ಮಾಡಿಕೊಳ್ಳಬಹುದು.

ಯಾವುದು ಏನಾದರೂ ಭಗವಂತನ ಕುರಿತು ಎಷ್ಟು ತಿಳಿದುಕೊಂಡರೆ ನಾವು ಅಷ್ಟು ಅದೃಷ್ಟವಂತರು. ಬ್ರಹ್ಮಕ್ಕಿಂತಲೂ ಮತ್ತೊಂದು ಏನೂ ಇಲ್ಲ. ಈ ವಿಷಯವನ್ನು ತಿಳಿದುಕೊಳ್ಳುವ ನಾವು ಎಲ್ಲರೂ ಕೂಡಾ ಈ 'ಶ್ವಾಸದ ಮೇಲೆ ಗಮನ' ಧ್ಯಾನವನ್ನು ಮಾಡುತ್ತಿದ್ದೇವೆ. "ಶ್ವಾಸದ ಮೇಲೆ ಗಮನ"ದ ಹೊರತು ಶರೀರದಲ್ಲಿರುವ ಭಗವಂತನನ್ನು ಸೇರುವುದು ಅಸಾಧ್ಯ, ಅಸಂಭವ.

ಆ ಕೆಲಸವನ್ನು ಮಾಡುವುದರಿಂದಲೇ ನಾವು ದಿನ ದಿನಕ್ಕೂ ಎಷ್ಟೋ ಬೆಳೆಯುತ್ತಿದ್ದೇವೆ. ನಿಮ್ಮ ಬೆಳವಣಿಗೆಗೆ ಕಾರಣ ನಿಮ್ಮಲ್ಲಿರುವ ಶ್ರದ್ಧೆ. ಮತ್ತೆ ನಿಮ್ಮನ್ನು ನೀವು ಒಂದು ಬಾರಿ ಗಮನಿಸಿಕೊಂಡರೆ ನಿಮ್ಮ ಹಿಂದಿನದಕ್ಕೂ, ಪ್ರಸ್ತುತಕ್ಕೂ ನಿಮ್ಮಲ್ಲಿ ಎಷ್ಟು ಬದಲಾವಣೆ ಬಂದಿದೆಯೋ, ಎಷ್ಟು ಬೆಳೆದಿರುವಿರೋ, ಎಷ್ಟು ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಿದ್ದೀರೋ, ಎಷ್ಟು ಬುದ್ಧಿಯನ್ನು ವಿಕಸನ ಮಾಡಿಕೊಂಡಿದ್ದಿರೋ ನಿಮಗೇ ತಿಳಿಯುತ್ತದೆ.

ಹಾಗೆಯೇ ಇನ್ನೂ ನೀವು ತಡಬಡಿಸುತ್ತಿದ್ದೀರಿ, ಮಾತನಾಡಲಾರದೆ ಹೋಗುತ್ತಿದ್ದೀರಿ, ಬೆಳೆಯದೇ ಹೋಗುತ್ತಿದ್ದೀರಿ ಅಂದರೆ ಕಾರಣ ನಿಮ್ಮಲ್ಲಿರುವ ಅಶ್ರದ್ಧೆ. ಅದಕ್ಕೆ ಕಾರಣ ಸಾಧಾರಣವಾಗಿ ಗುರುವು ಬೋಧಿಸುತ್ತಿರುವಾಗ ಕೇಳುತ್ತಿದ್ದೀರಾಗಲಿ, ಅದು ಸರಿ ಹೋಗದು. ಕೇಳಿದ್ದನ್ನು ಮತ್ತೆ ಒಂದಕ್ಕೆ ಹತ್ತು ಬಾರಿ ಮನವನ್ನು ಮಾಡಿಕೊಂಡು ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಏನು ಮಾಡದೆ ನಿಮ್ಮ ಜ್ಞಾನವು ಬೆಳೆಯದು, ನೀವು ಉನ್ನತ ಸ್ಥಾಯಿಗೆ ಸೇರಲಾರಿರಿ.

ನಾನು ಈ ಧ್ಯಾನ ಮಾರ್ಗದೊಳಗೆ ಬರುವ ಮೊದಲು ಯೋಗಾಸನಗಳನ್ನು ಮಾಡುತ್ತಿದ್ದೆನು. ಅಲ್ಲಿ ಗುರುಗಳು ಬೆಳಿಗ್ಗೆ ಒಂದು ಗಂಟೆ ಆಸನಗಳನ್ನು ಹಾಕಿಸಿ ಕಳುಹಿಸುತ್ತಿದ್ದರು. ಮತ್ತೆ ಮರುದಿನ ಹೋದರೆ ಮತ್ತೇ ಆ ಆಸನಗಳನ್ನೇ ಹಾಕಿಸುತ್ತಾರೆ. ಅವರು ಏನು ಹೇಳಿದರೆಂದರೆ, ಒಂದು ಆಸನದಲ್ಲಿ ನಾವು ಒಂದು ಅರ್ಧಗಂಟೆ ಸ್ಥಿರವಾಗಿ ಇರಬಲ್ಲೆವಾದರೆ ನಿಮಗೆ ಆಸನ ಸಿದ್ಧಿಯಾದಂತೆ ಎಂದರು.

ಆದರೆ ಅದೇ ರೀತಿಯಾದ ಆಸನದಲ್ಲಿ ಗಂಟೆ, ಅರ್ಧಗಂಟೆ ಕದಲದಂತೆ ಇದ್ದು ಬಿಡಬೇಕೆಂದರೆ ಬಹಳಕಷ್ಟ. ಐದು ನಿಮಿಷಗಳು ಸಹ ಇರಲಾರರು. ನಾನು ಏನು ಮಾಡುತ್ತಿದ್ದೇನೆಂದರೆ, ಹೀಗೆ ಬೆಳಿಗ್ಗೆ ಬಂದು ಆತನ ಹೇಳಿದವುಗಳನ್ನು ಸ್ವಲ್ಪ ಹೊತ್ತು ಆ ಆಸನದಲ್ಲಿ ಇದ್ದರೆ ಮಾತ್ರಕ್ಕೆ ಏನು ಸರಿ ಹೋಗುತ್ತದೆ ಎಂದು ಮನೆಗೆ ಹೋದ ನಂತರ ಒಂದೊಂದು ಆಸನದಲ್ಲಿ ಎಷ್ಟು ಹೊತ್ತು ಸಾಧ್ಯವಾದರೆ ಅಷ್ಟು ಹೊತ್ತು ಇರುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೆನು. ಅದೇ ಆಸನವನ್ನು ಹಾಗೆ ಒಂದು ತಿಂಗಳು, ಎರಡು ತಿಂಗಳು ಮಾಡುವುದರೊಳಗೆ ಮತ್ತೇ ಅದೇ ರೀತಿಯಾದ ಆಸನದಲ್ಲಿ ಅರ್ಧಗಂಟೆ, ಗಂಟೆಯೂ ಕೂಡಾ ಕುಳಿತುಕೊಳ್ಳಬಲ್ಲವನಾದೆನು.

ಹಾಗಾದರೆ ಉಳಿದವರು ಕೂಡಾ ಕುಳಿತುಕೊಳ್ಳುತ್ತಿದ್ದೀರಾ ಅಂದರೆ? ಕುಳಿತುಕೊಳ್ಳಲಾರದೆ ಹೋದರು. ಆ ಗುರುವಿನ ಬಳಿಯಿಂದ ಮನೆಗೆ ಬಂದ ನಂತರ ಮಧ್ಯಾಹ್ನದಿಂದ ನಾನು ಶ್ರದ್ಧೆಯಿಂದ ಮಾಡುವ ಅಭ್ಯಾಸವೇ ಅದಕ್ಕೆ ಕಾರಣ. ಅಭ್ಯಾಸವಿಲ್ಲದವನು ಹಾಗೆಯೇ ಏಳುತ್ತಾ, ಬೀಳುತ್ತಾ ಇರುತ್ತಾನೆ. ಕಾರಣ ಅಭ್ಯಾಸ ಮಾಡಿದವನು ಸಾಧಿಸುತ್ತಾನೆ. ಆದ್ದರಿಂದ ನಾನು ಎರಡು ತಿಂಗಳುಗಳಲ್ಲಿಯೇ ಗುರುವಾಗಿ ಬೆಳೆದುಬಿಟ್ಟೆನು. ಗುರುಗಳು ಏನನ್ನು ಮಾಡುತ್ತಿದ್ದರೋ ಅವೆಲ್ಲಾ ಮಾಡುತ್ತಿದ್ದೆನು. ನಾನೇ ಎಲ್ಲರಿಗೆ ಕಲಿಸಲು ಪ್ರಾರಂಭಿಸಿದೆನು. ಮತ್ತೆ ಎಲ್ಲರೂ ಬೆಳೆಯಲಾರದೆ ಹೋದರು. ನಾನು ಏಕೆ ಬೆಳೆದೆ? ನಾನು ಅಲ್ಲಿಗೇ ಸರಿ ಮಾಡಿಕೊಳ್ಳದೇ ಮನೆಯಲ್ಲಿಯೂ ಅಭ್ಯಾಸ ಮಾಡಿದೆನು.

ಅದಕ್ಕೆ ನಿಮಗೆ ಹೇಳುತ್ತೇನೆ, ನೀವು ಕ್ಲಾಸ್ ಹೇಳಿರಿ ಎಂದರೆ ಅವಕಾಶ ಬಂದಾಗ ಹೇಳಿ ಬಿಡುತ್ತೀರಿ, ಮತ್ತೆ ಎರಡು ತಿಂಗಳಿಗೊ, ಮೂರು ತಿಂಗಳಿಗೊ ಅವಕಾಶ ಬಂದರೆ ಆಗ ಹೇಳುತ್ತೀರಿ. ಎಲ್ಲಿ ಬೆಳೆಯುತ್ತೀರಿ? ಆಲೋಚಿಸಿರಿ. ಅವರು ಚೆನ್ನಾಗಿ ಹೇಳುತ್ತಿದ್ದಾರೆ, ಇವರು ಚೆನ್ನಾಗಿ ಹೇಳುತ್ತಿದ್ದಾರೆ, ಅಂದರೆ ಅವರ ಕೃಷಿ, ಅವರ ಛಲ, ಅವರ ಶ್ರದ್ಧೆ, ಅವರು ಮಾಡುವ ಕೆಲಸ ನಮಗೆ ಎಲ್ಲಿ ಕಾಣಿಸುತ್ತವೆ?

ಇನ್ನು ಕೆಲವರಿಗೆ ಹಿಂದಿನ ಜನ್ಮಗಳ ಸಂಸ್ಕಾರ ಕೂಡಾ ಇರುತ್ತದೆ. ಅದು ಕೂಡಾ ಅವರಿಗೆ ಕಡಿಮೆ ಸಮಯದಲ್ಲಿ ಹೆಚ್ಚು ಫಲಿತಾಂಶವನ್ನು ಕೂಡಾ ಕೊಡುತ್ತಾ ಇರುತ್ತದೆ.

ಆದ್ದರಿಂದ ಕಡ್ಡಾಯವಾಗಿ ಈ ವಿಷಯವನ್ನು ಅರ್ಥ ಮಾಡಿಕೊಂಡು ಸ್ವಲ್ಪ ಶ್ರಮಪಡಿರಿ. ಇಂತಹ ಶ್ರೇಷ್ಠ ಮಾರ್ಗದೊಳಗೆ ಬಂದು ಅಶ್ರದ್ಧೆ ಮಾಡಬೇಡಿರಿ. ನೀವು ನಿಮ್ಮ ಬುದ್ಧಿಯನ್ನು ವಿಕಸನ ಮಾಡಿಕೊಂಡರೆ ನೀವು ಮಾಡುವುದು ಶ್ರೇಷ್ಠವಾದದ್ದೋ? ಅಲ್ಲವೇ? ಎಂಬುದು ನಿಮಗೆ ಅರ್ಥವಾಗುತ್ತದೆ.

** ** **

## 06

### "ಸಮಸ್ತವಾದ ಬ್ರಹ್ಮಾದಿ ದೇವತೆಗಳೆಲ್ಲರೂ ಕೂಡಾ ಆ ಅಖಂಡಾನಂದ ಸ್ವರೂಪವಾದ ಬ್ರಹ್ಮ ರಸದಲ್ಲಿ ಸ್ವಲ್ಪವಾದ ಆನಂದ ರಸವನ್ನು ಅವರವರ ಭೇದಗಳನ್ನು ಅನುಸರಿಸಿ, ಆನಂದಿಸಿದವರು ಆಗುತ್ತಿದ್ದಾರೆ" ಎಂದಿದ್ದಾರೆ.

ಅಖಂಡಾನಂದ ಅಂದರೆ ಅಂತ್ಯವಿಲ್ಲದ ಆನಂದ ಸ್ವರೂಪ. ಅದನ್ನು ವರ್ಣಿಸುವುದಕ್ಕೆ ಕೂಡಾ ಸಾಧ್ಯವಾಗದು. ಇಲ್ಲಿ ಬ್ರಹ್ಮವನ್ನು ಆನಂದ ಸ್ವರೂಪವಾಗಿ ವಿವರಿಸಿದ್ದಾರೆ. ಆತನ ಸ್ವರೂಪವೇ ಆನಂದ ...... ಅದು ಅನಂತವಾದ ಆನಂದ. ಅಷ್ಟು ಇಷ್ಟು ಎಂದು ಹೇಳಿ ವಿವರಿಸುವುದಕ್ಕೆ ಕೂಡಾ ಸಾಧ್ಯವಿಲ್ಲ.

ಮತ್ತೇ ಬ್ರಹ್ಮಾದಿ ದೇವತೆಗಳು ಎಂದರೆ ಬ್ರಹ್ಮ, ವಿಷ್ಣು, ಮಹೇಶ್ವರರೇ ಅಲ್ಲ, ಇನ್ನು ಇಂದ್ರನು, ವರುಣನು, ಯಕ್ಷರು, ಕಿನ್ನರರು, ಕಿಂಪುರುಷರು, ಅವರೇ ಅಲ್ಲಾ ಋಷಿಗಳು, ಮಹರ್ಷಿಗಳು, ಯೋಗಿಗಳು, ಸಿದ್ಧರು, ಅವಧೂತರು ನಮ್ಮಂತಹ ಸಾಧಕರು ಕೂಡಾ ಮಾಡುತ್ತಿರುವಂತ ಸಾಧನೆಯ ಮೂಲಕ ಆನಂದವನ್ನೇ ಹೊಂದುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ.

ಯಾರು ಮಾಡಿದ ಸಾಧನೆಯನ್ನು ಆಧರಿಸಿ, ಅವರ ಸ್ಥಾಯಿಗೆ ಅನುಗುಣವಾಗಿ ಅವರು ಆ ಆನಂದವನ್ನು ಅನುಭವಿಸುತ್ತಿದ್ದಾರೆ. ಆ ಆನಂದವನ್ನು ಎಷ್ಟಾದರೂ ಸ್ವೀಕರಿಸಬಹುದು. ಆದರೆ ಅವರವರ ಸ್ಥಾಯಿಯನ್ನಾಧರಿಸಿ, ಅವರವರ ಸಾಧನೆಗೆ ಅನುಗುಣವಾಗಿ ಎಷ್ಟು ತೆಗೆದುಕೊಂಡರೆ ಅಷ್ಟೇ ತೆಗೆದುಕೊಳ್ಳುತ್ತಾರೆ. ಅದೇನು ಕರಗಿ ಹೋಗದು, ಸವೆದು ಹೋಗದು, ಹಾಗೆ ಬರುತ್ತಲೇ ಇರುತ್ತದೆ ಆನಂದ.

ಈಗನೋಡಿ, ನಾವು ಧ್ಯಾನವನ್ನು ಮಾಡುತ್ತಿದ್ದೇವೆ. ಧ್ಯಾನವನ್ನು ಮಾಡುವಾಗ ಮೊದಲು ಕಣ್ಣನ್ನು ಮುಚ್ಚುತ್ತೇವೆ, ಕಣ್ಣು ಮುಚ್ಚಿದೊಡನೆ ಆಲೋಚನೆಗಳು ಬರುತ್ತವೆ, ಆಲೋಚನೆ ಬಂದೊಡನೆ ಕಟ್ ಮಾಡಿ 'ಶ್ವಾಸದ ಮೇಲೆ ಗಮನ' ಇಡುತ್ತೇವೆ. ಹೀಗೆ

ಮಾಡುತ್ತಾ ಮಾಡುತ್ತಾ ಇದ್ದಾಗ ಆಲೋಚನೆಗಳು ನಿಂತು ಬಿಡುತ್ತವೆ. ಯಾವಾಗಾದರೆ ಆಲೋಚನೆಗಳು ನಿಂತು ಬಿಡುತ್ತೇವೆಯೋ ಇನ್ನು ಅಲ್ಲಿರುವುದು ಏನು ಅಂದರೆ? ಆತ್ಮ ಅಂದರೆ ಬ್ರಹ್ಮ. ಬ್ರಹ್ಮನು ಎಂದರೆ ಯಾರು ಎಂದರೆ? ಆನಂದವೇ ಆತನ ಸ್ವರೂಪ. ಅಂದರೆ ಆ ಸ್ಥಿತಿಯಲ್ಲಿ ನೀವು ಆ ಆನಂದ ಸ್ವರೂಪದೊಡನೆ ಇದ್ದೀರಿ ಆ ಆನಂದದಲ್ಲಿದ್ದೀರಿ, ಆನಂದವನ್ನು ಸವಿಯುತ್ತಿದ್ದೀರಿ ಅಂದರೆ ಅನುಭವಿಸುತ್ತಿದ್ದೀರಿ.

ಅದೇ ಸ್ಥಿತಿಯಲ್ಲಿ ಐದು ಗಂಟೆಗಳು ಕುಳಿತವರು ಐದು ಗಂಟೆಗಳ ಆನಂದವನ್ನು ಅನುಭವಿಸುತ್ತಾರೆ. ಮೂರು ಗಂಟೆಗಳು ಕುಳಿತವರು ಮೂರು ಗಂಟೆಗಳ ಆನಂದವನ್ನು ಹೊಂದುತ್ತಾರೆ. ಎರಡು ಗಂಟೆಗಳು ಕುಳಿತವರು ಎರಡು ಗಂಟೆಗಳು ಆನಂದವನ್ನು ಹೊಂದುತ್ತಾರೆ.

ಅಷ್ಟು ಆನಂದವನ್ನು ಅನುಭವಿಸಿದೆವೆ? ಇಲ್ಲಾ? ಎನ್ನುವುದು ಹೇಗೆ ತಿಳಿಯುತ್ತದೆ ಎಂದರೆ! ಆ ಆಲೋಚನೆಗಳು ಇಲ್ಲದ, ಮನಸ್ಸು ಕೆಲಸ ಮಾಡದ ಸ್ಥಿತಿಯಲ್ಲಿ ನೀವು ಕುಳಿತಾಗ, ಆ ಆನಂದವನ್ನು ಅನುಭವಿಸುತ್ತಿರುವಾಗ ನಿಮಗೆ ಸಮಯವು ತಿಳಿಯದು. ಐದು ಗಂಟೆಗಳು ಕುಳಿತರೂ, 5 ನಿಮಿಷಗಳಂತೆ ಇರುತ್ತದೆ. ನಿಜವಾಗಿಯೂ ಕುಳಿತಂತೆಯೇ ಇರದು. ಏಕೆ ಇರದು ಎಂದರೆ? ಆನಂದವನ್ನು ಅನುಭವಿಸುತ್ತಾ ಇರುವುದರಿಂದ.

ಅದೇ ಅವಧೂತರಾದರೆ ದಿನಗಟ್ಟಲೆ, ತಿಂಗಳು ಗಟ್ಟಲೆ ಇದ್ದುಬಿಡುತ್ತಾರೆ. ಬಾಲಯೋಗಿಯಂತವರಾದರೆ ಎಷ್ಟು ವರ್ಷಗಳಾದರೂ ಹಾಗೆಯೇ ಇದ್ದು ಬಿಡುತ್ತಾರೆ. ಹಾಗೆಯೇ ಭೀಮವರಂನ ಮೂರು ದಿನಗಳ ತರಗತಿಗಳಿಗೆ ಬಂದಾಗ ಬೆಳಿಗ್ಗೆ ಮೂರು ಗಂಟೆಗಳು ಕುಳಿತುಕೊಳ್ಳುವವರೂ ಇದ್ದಾರೆ.

ಎಷ್ಟು ಹೊತ್ತು ಆ ಸ್ಥಿತಿಯಲ್ಲಿ ಕುಳಿತುಕೊಳ್ಳುತ್ತಾರೋ ಅಷ್ಟು ಆನಂದವನ್ನು ಅವರು ಹೊಂದುತ್ತಿರುವಂತೆ ಲೆಕ್ಕ. ಪರಮ ಶಿವನೂ ಹಾಗೇ ಇದ್ದು ಆನಂದವನ್ನು ಅನುಭವಿಸುತ್ತಿದ್ದಾನಾತ. ಆ ರುಚಿ ತಿಳಿದವನು ಅದನ್ನು ಬಿಡಲಾರನು.

ಅದಕ್ಕೆ ನೀವು ನೋಡಿ ರಮಣ ಮಹರ್ಷಿಯಂತರವರು ಆ ಸ್ಥಿತಿಯಲ್ಲಿ ಆನಂದವನ್ನು ಅನುಭವಿಸುತ್ತಾ .... ಅದಕ್ಕೂ ಮೊದಲಿನ ಪ್ರಪಂಚದಲ್ಲಿ ಅಷ್ಟು ಆನಂದವನ್ನು ಯಾವುದರಿಂದಲೂ ಹೊಂದಲಾರದ್ದರಿಂದ ಏಳಲಾರದೆ ಹೋದನು. ಕೆಲವು ವರ್ಷಗಳು ಹಾಗೆಯೇ ಇದ್ದು ಬಿಟ್ಟನು. ಅಂತಹ ಸ್ಥಿತಿಯನ್ನು 'ಸಮಾಧಿ ಸ್ಥಿತಿ' ಎನ್ನುತ್ತಾರೆ. ಆತನಿಗೆ ಏನಾಯಿತೋ ಎಂದು ಹೇಳಿ ಬಹಳ ಗಟ್ಟಿ ಪ್ರಯತ್ನ ಮಾಡಿ ಆತನನ್ನು ಸಹಜ ಸ್ಥಿತಿಗೆ ಕರೆತಂದರು.

ಅಂದರೆ ಬ್ರಹ್ಮದೊಡನೆ ಇದ್ದಾಗ ಅಷ್ಟು ಆನಂದವನ್ನು ಹೊಂದುತ್ತೇವೆ. ಅಂತಹ ಆ ಬ್ರಹ್ಮರಸದಲ್ಲಿ ಯಾರಿಗೆ ಅವರು, ಅವರವರ ಸಾಧನೆಯ ಸ್ಥಾಯಿಗೆ ಅನುಗುಣವಾಗಿ ಏನೋ ಸ್ವಲ್ಪ ಆನಂದ ರಸವನ್ನು ಅನುಭವಿಸುತ್ತಿದ್ದಾರೆ.

ಇಲ್ಲಿ ನಾವು ಏನೆಂದುಕೊಳ್ಳುತ್ತೇವೆಂದರೆ ಎರಡು ಗಂಟೆಂಗಳು ಕುಳಿತುಕೊಳ್ಳಬೇಕು, ಮೂರು ಗಂಟೆಗಳು ಕುಳಿತುಕೊಳ್ಳಬೇಕು ಎಂದು ಸ್ವಲ್ಪ ಸಮಯವನ್ನು ನಿರ್ಣಯಿಸಿ ಕೊಳ್ಳುತ್ತೇವೆ. ನೀವು ಯಾವಾಗಾದರೆ ಹಾಗೆ ಸ್ವಲ್ಪ ಸಮಯವನ್ನು ನಿರ್ಣಯಿಸಿಕೊಳ್ಳುತ್ತೀರೋ ಅಷ್ಟು ಹೊತ್ತೇ ಕುಳಿತುಕೊಳ್ಳಬಲ್ಲಿರಿ. ಅದಕ್ಕೂ ಮೀರಿ ಕುಳಿತುಕೊಳ್ಳಲಾರಿರಿ, ಎದ್ದು ಬಿಡುತ್ತೀರಿ.

ಏಕೆಂದರೆ "ಯದ್ಭಾವಂ ತದ್ಭವತಿ" ಎನ್ನುವಂತೆ ಅಷ್ಟು ಕುಳಿತುಕೊಳ್ಳಬೇಕೆಂದು ನೀವು ಭಾವಿಸಿದ್ದರಿಂದಲೇ ಅಲ್ಲಿಗೆ ನಿಂತುಬಿಟ್ಟಿತು. ಭಾವಿಸದಿದ್ದರೆ ಇನ್ನೂ ಹಾಗೇ ಆನಂದವನ್ನು ಅನುಭವಿಸುತ್ತಲೇ ಇರುತ್ತಾರೆ. ಅವರಿಗೆ ವರ್ಷಗಳು ನಿಮಿಷಗಳಾಗಿ ಕಳೆದು ಹೋಗುತ್ತವೆ. ಅಷ್ಟು ಶ್ರೇಷ್ಠವಾದದು ಆ ಆನಂದವು.

ಪ್ರಪಂಚದಲ್ಲಿರುವ ಎಲ್ಲಾ ರೀತಿಯ ಸುಖಗಳಲ್ಲಿ ಆನಂದವಿದೆ ಎಂದು ಕೊಳ್ಳುತ್ತಾ ಸುಖಗಳನ್ನು ಅನುಭವಿಸುವುದಕ್ಕೆ, ಸುಖಗಳನ್ನು ಹೊಂದುವುದಕ್ಕೆ ಪ್ರಯತ್ನಿಸುತ್ತಿದ್ದಾರಾಗಲಿ, ಆ ಬ್ರಹ್ಮವನ್ನೇನಾದರೂ ನಾವು ಆಶ್ರಯಿಸಿದೆವಾದರೆ ಹೊಂದುವ ಆನಂದವು ವರ್ಣನಾತೀತ ಎಂಬ ವಿಷಯ ತಿಳಿಯುತ್ತಿಲ್ಲ.

ನಮ್ಮ ಸಾಧಕರು ಕೂಡಾ ಯಾರ ಸ್ಥಾಯಿಯಲ್ಲಿ ಅವರು ಆನಂದವನ್ನು ಅನುಭವಿಸುತ್ತಿದ್ದಾರೆ. ಇಲ್ಲಿ ಕುಳಿತು ಕೊಳ್ಳುವುದು ಲೆಕ್ಕವಲ್ಲ, ಕುಳಿತಿರುವ ಸಮಯದಲ್ಲಿ ಆ ಆನಂದವನ್ನು ಎಷ್ಟು ಅನುಭವಿಸುತ್ತಿದ್ದೇವೆ ಎಂಬುದೇ ಮುಖ್ಯ.

ಈಗ ಆಂಜನೇಯ ಸ್ವಾಮಿಯನ್ನೇ ತೆಗೆದುಕೊಂಡರೆ, ಯಾರನ್ನು ತೆಗೆದುಕೊಂಡರೂ ಇನ್ನು ಏಳುವುದಿಲ್ಲ. ಅದರ ಅನುಭೂತಿಯನ್ನು ಹೊಂದಬೇಕು. ಯಾರಾಗಲಿ ಸರಿ ಹಾಗೆ ಕುಳಿತುಕೊಳ್ಳುತ್ತಾ, ಕುಳಿತು ಕೊಳ್ಳುತ್ತಿರುವಾಗ ಕೆಲವು ದಿನಗಳಲ್ಲಿ ಆ ಆನಂದವನ್ನು ಅನುಭವಿಸುತ್ತಾರೆ. ಅಂತಹ ಆನಂದ ಪ್ರಾಪಂಚಿಕವಾಗಿ ನಿಮಗೆ ಎಲ್ಲಿಯೂ ಲಭಿಸುವುದಿಲ್ಲ. ಸಂಸಾರದಲ್ಲಿ, ಸಂಪತ್ತಿನಲ್ಲಿ, ಭೋಗಗಳಲ್ಲಿ, ಯಾವುದರಲ್ಲೂ ಲಭಿಸುವುದಿಲ್ಲ. ಯಾವುದರಲ್ಲಾದರೂ ನಿಮಗೆ ಲಭಿಸಿದರೂ ಅದು ತಾತ್ಕಾಲಿಕವೇ.

ಅದಕ್ಕೆ ನಾವು ಇದನ್ನು ಗಾಢ ನಿದ್ದೆಯೊಂದಿಗೆ ಹೋಲಿಸುತ್ತೇವೆ. ಗಾಢ ನಿದ್ರಾ ಸ್ಥಿತಿಯಲ್ಲಿ ಕೂಡಾ ಬ್ರಹ್ಮದೊಂದಿಗೇ ಇರುತ್ತೇವೆ. ಅಲ್ಲಿಯೂ ಕೂಡಾ ಮನಸ್ಸು ಇರುವುದಿಲ್ಲ. ಅಲ್ಲಿ ಪ್ರಜ್ಞೆ ಇರುವುದಿಲ್ಲ, ಇಲ್ಲಿ ಪ್ರಜ್ಞೆ ಇರುತ್ತದೆ, ಅದೇ ವ್ಯತ್ಯಾಸ. ಅಲ್ಲಿ

ಆನಂದ ಅಪ್ರಯತ್ನವಾಗಿ ಬರುತ್ತದೆ, ಇಲ್ಲಿ ಪ್ರಯತ್ನ ಪೂರ್ವಕವಾಗಿ ಸಂಪಾದಿಸಿಕೊಳ್ಳಬೇಕು.

ಆನಂದವೇ ಆತನ ಸ್ವರೂಪವಾದ್ದರಿಂದಲೇ ಅಂತಹ ಶ್ರೇಷ್ಠ ಬ್ರಹ್ಮವನ್ನು ನಾವು ಈ "ಶ್ವಾಸದ ಮೇಲೆ ಗಮನ" ಧ್ಯಾನದ ಮೂಲಕ ಆಶ್ರಯಿಸುವುದರಿಂದ ಆ ಆನಂದವನ್ನು ಹೊಂದುತ್ತಿದ್ದೇವೆ. ನೋಡಿರಿ, ಸುಖ ಬೇರೆ, ಸಂತೋಷ ಬೇರೆ. ಸುಖ, ಸಂತೋಷಗಳು ಶರೀರಕ್ಕೆ, ಮನಸ್ಸಿಗೆ ಸಂಬಂಧಿಸಿದವು, ಅವು ತಾತ್ಕಾಲಿಕವು, ಆನಂದವೆಂಬುದು ಆತ್ಮಕ್ಕೆ ಸಂಬಂಧಿಸಿದ್ದು, ಶಾಶ್ವತವಾದದ್ದು. ಆ ಆನಂದವನ್ನು ಹೊಂದುವುದಕ್ಕಾಗಿಯೇ ಎಲ್ಲರೂ ಪ್ರಯತ್ನಿಸುತ್ತಿದ್ದಾರೆ.

ನಾವು ಪ್ರತಿದಿನ ಪರಬ್ರಹ್ಮನೊಂದಿಗೆ ಇರಬೇಕೆಂದು ಪ್ರಯತ್ನಿಸುತ್ತಿದ್ದೇವೆ. ಪರಬ್ರಹ್ಮ ಯಾರೋ ಅಲ್ಲ. ಪತ್ರೀಜಿಯವರು ಹೇಳಿದ್ದಾರಲ್ಲಾ, ಆತ್ಮನೇ ಪರಬ್ರಹ್ಮನೆಂದು. ಆತ್ಮದೊಡನೆಯೇ ನಾವು ದಿನಾಲೂ ಗಂಟೆ ಗಟ್ಟಲೆ ಇರುತ್ತಿದ್ದೇವೆ. ಕಣ್ಣು ಮುಚ್ಚಿಕೊಂಡಾಗ ಮನಸ್ಸಿನಲ್ಲಿ ಆಲೋಚನೆಗಳು ಬಂದರೆ ಕಟ್ ಮಾಡಿ "ಶ್ವಾಸದ ಮೇಲೆ ಗಮನ" ಇಡುತ್ತಿದ್ದೇವೆ.

"ಶ್ವಾಸದ ಮೇಲೆ ಗಮನ"ದ ಮೂಲಕ ಆಲೋಚನೆಗಳ ಪ್ರಭಾವವು ಕಡಿಮೆಯಾಗುತ್ತದೆ, ಇನ್ನು ಅಲ್ಲಿ ಇರುವುದು ಆತ್ಮವೇ. ಮತ್ತೆ ಆ ಪರಬ್ರಹ್ಮನೊಂದಿಗೆ ನಾವು ಇರುತ್ತಾ ಇರುತ್ತಾ ನಾವೇ ಪರಬ್ರಹ್ಮವಾಗುತ್ತೇವೆ.

ಏಕೆ ಇಷ್ಟು ಕಷ್ಟಪಟ್ಟು ಮಾಡುವುದು ಎಂದರೆ? ಆ ಸ್ಥಿತಿಗೆ ಬೆಳೆಯುವುದಕ್ಕೆ. ಮಾನವನ ಲಕ್ಷಣಗಳಲ್ಲಿರುವ ನಾವು ಆ ಅವಲಕ್ಷಣಗಳನ್ನೆಲ್ಲಾ ತೊಲಗಿಸಿಕೊಳ್ಳುತ್ತಾ ನಿಧಾನವಾಗಿ ನಮ್ಮಲ್ಲಿ ದೈವ ಲಕ್ಷಣಗಳನ್ನು ಸಂಪಾದಿಸಿಕೊಳ್ಳಬೇಕು. ಅದೇ ಈ ಧ್ಯಾನವನ್ನು ಮಾಡುವುದರ ಉದ್ದೇಶ. ಒಂದೇ ಬಾರಿಗೆ ಬದಲಾವಣೆಯಾಗದು, ಮಾನವನು ಒಂದೇ ಬಾರಿಗೆ ದೇವರಾಗಿ ಬಿಡುವುದಿಲ್ಲ, ನಿಧಾನವಾಗಿ, ನಿಧಾನವಾಗಿ ಬದಲಾವಣೆ ಬರುತ್ತದೆ.

ನಾವು ನೋಡುತ್ತಿದ್ದೇವಲ್ಲಾ ಭ್ರಮರ ಕೀಟಕ ನ್ಯಾಯವೆಂದು. ಆ ಒಂದು ಕೀಟವನ್ನು ತಂದು ಭ್ರಮರವು ಗೂಡಿನಲ್ಲಿಟ್ಟು, ಅದರ ಗೂಡಿನ ಮುಂದೆಯೇ ಝೇಂಕಾರವನ್ನು ಮಾಡುತ್ತಾ ಇರುತ್ತದೆ. ಅದನ್ನು ಕೇಳಿ, ಕೇಳಿ ಕೆಲವು ದಿನಗಳಿಗೆ ಆ ಕೀಟವೂ ಕೂಡಾ ಭ್ರಮರವಾಗಿ ಬದಲಾಗಿ ಬಿಡುತ್ತದೆ.

ರಮಣ ಮಹರ್ಷಿಯು ರಮಣ ಭಗವಾನನಾಗಿ, ಬುದ್ಧನು ಬುದ್ಧ ಭಗವಾನನಾಗಿ, ಹನುಮಂತನು ಆಂಜನೇಯ ಸ್ವಾಮಿಯಾಗಿ, ಫಕೀರನಾಗಿ ಇದ್ದಂತ ಷಿರಿಡಿ ಬಾಬಾ ದೈವವಾಗಿ ಬದಲಾದರಲ್ಲ! ಯಾರಾದರೂ ಆಗುತ್ತಾರೆ. 13 ವರ್ಷಗಳು ನಾನು ನನ್ನ

ಗುರುವಿನೊಂದಿಗೆ ಇದ್ದೇನೆ ಎಂದನು, ಅಂದರೆ ಆ ಪರಬ್ರಹ್ಮನೊಡನೆ ಇದ್ದೇನು ಎಂದನು ಷಿರಿಡಿ ಬಾಬಾ. ನಾವೇಕೆ ಆಗುವುದಿಲ್ಲ? ಆಗಿಯೇ ತೀರುತ್ತೇವೆ.

ಈ ಪ್ರಯತ್ನದಲ್ಲಿ ನಮಗೆ ತಿಳಿಯದಂತೆಯೇ ನಮ್ಮಲ್ಲಿ ಎಷ್ಟೋ ಬದಲಾವಣೆಗಳು ಬರುತ್ತವೆ. ಮೊದಲು ಮನಸ್ಸು ನಿಶ್ಚಲವಾಗುತ್ತದೆ, ನಂತರ ಶುದ್ಧಿಯಾಗುತ್ತದೆ, ನಿಧಾನವಾಗಿ ಗುಣವೂ ಬದಲಾಗುತ್ತಿರುತ್ತದೆ, ನಂತರ ಬುದ್ಧಿ ವಿಕಸಿಸುತ್ತಾ ಇರುತ್ತದೆ, ವಿವೇಕ ಉಂಟಾಗುತ್ತದೆ, ಹಾಗೆ ಜ್ಞಾನವೂ ಕೂಡಾ ಬೆಳೆಯುತ್ತಾ ಇರುತ್ತದೆ. ಬುದ್ಧಿವಂತಿಕೆಯು ಬೆಳೆಯುತ್ತದೆ, ನಿಮ್ಮ ವರ್ತನೆಯಲ್ಲಿಯೂ ಕೂಡಾ ತಿಳಿಯದ ಬದಲಾವಣೆಗಳು ಬರುತ್ತವೆ.

ಹಾಗೆ ಎಷ್ಟೋ ಬದಲಾಗುತ್ತಾ ಕೊನೆಗೆ ಆ ಪರಬ್ರಹ್ಮ ಸ್ಥಿತಿಗೆ ಸೇರಿಕೊಳ್ಳುತ್ತೇವೆ, ಇದು ಸಹಜ. ಮೂರು ತಿಂಗಳು ನೀವು ಯಾರೊಡನೆ ಸಾಂಗತ್ಯ ಮಾಡಿದರೆ ಅವರಾಗಿ ಬಿಡುತ್ತೀರಿ. ಮೂರು ತಿಂಗಳು ಒಂದು ಕುಡುಕನೊಂದಿಗೆ ನೀವು ಸಾಂಗತ್ಯವನ್ನು ಮಾಡಿದರೆ, ನೀವು ಕುಡುಕರಾಗಿ ಬಿಡುತ್ತೀರಿ. ನಮಗೆ ಒಂದು ಸಣ್ಣ ಕತೆಯನ್ನು ಕೂಡಾ ಹೇಳುತ್ತಾ ಇರುತ್ತಾರೆ.

ಒಂದು ಊರಿನಲ್ಲಿ ತಂದೆ–ಮಗನಿದ್ದರಂತೆ. ಮಗನು ಕೆಲಸ, ಬೊಗಸೆ ಬಿಟ್ಟು ಕುಡಿಯುತ್ತಾ ಇದ್ದರೆ ತಂದೆಯು ಬೈಯುತ್ತಾ ಇದ್ದನಂತೆ. ಎಷ್ಟು ಬೈದರೂ, ಏನು ಮಾಡಿದರೂ ಅವನ ಬುದ್ಧಿಯು ಬದಲಾಗಲಿಲ್ಲ. ಇನ್ನೂ ಬೇಸರ ಬಂದು, ಒಂದು ದಿನ ಮಗನನ್ನು ಚೆನ್ನಾಗಿಯೇ ಬೈದನು ತಂದೆ. ನಿನ್ನ ಬುದ್ಧಿಯುನ್ನು ಬದಲಾಯಿಸಿಕೊಳ್ಳುವೆಯಾ? ಇಲ್ಲದಿದ್ದರೆ ನನ್ನನ್ನು ಸತ್ತು ಹೋಗು ಎನ್ನುವೆಯಾ? ಎಂದು. ಆಗ ಮಗನು ನೀನು ಹೇಳಿದಂತೆ ಬಿಟ್ಟು ಬಿಡುತ್ತೇನೆ ಆದರೆ ಒಂದು ಷರತ್ತು ಎಂದನು.

ತಂದೆಯು ಏನು ಹೇಳು? ಎಂದನು. ಏನು ಇಲ್ಲ, ಈಗಿನಿಂದ ಎರಡು ತಿಂಗಳು ನನ್ನೊಂದಿಗೆ ನೀನು ಕೂಡಾ ದಿನವೂ ಕುಡಿಯುತ್ತಾ ಇರಬೇಕು, ಆಗ ಎರಡು ತಿಂಗಳುಗಳು ಆದ ಮೇಲೆ ನಾನು ಬಿಟ್ಟು ಬಿಡುತ್ತೇನೆ ಎಂದನು. ಮಗನಿಗೆ ಯಾವುದೋ ಒಂದು ರೀತಿಯಲ್ಲಿ ಬಿಡಿಸಬೇಕೆಂದು, ಸರಿ ಎಂದು ಅಂಗೀಕರಿಸಿದನು ತಂದೆ.

ಆಗಿನಿಂದ ಇಬ್ಬರೂ ಸೇರಿ ಕುಡಿಯಲು ಪ್ರಾರಂಭಿಸಿದರು. ನಿಧಾನವಾಗಿ ಎರಡು ತಿಂಗಳುಗಳು ಕಳೆದವು. ಎರಡು ತಿಂಗಳು ಕಳೆದ ನಂತರ ತಂದೆಗೆ ಮಾತು ಕೊಟ್ಟ ಪ್ರಕಾರ ಇನ್ನೂ ಈ ದಿನದಿಂದ ನಾನು ಮದ್ಯವನ್ನು ಮುಟ್ಟುವುದಿಲ್ಲ ಎಂದನು ಮಗ. ಆಗ ತಂದೆಯು ನೀನು ಬಿಟ್ಟರೆ ಬಿಡು, ನಾನು ಮಾತ್ರ ಬಿಡುವುದಿಲ್ಲ ಅಂದನು.

ಅದನ್ನು ಗಮನಿಸಿ ಅರ್ಥ ಮಾಡಿಕೊಳ್ಳಿ, ಮಗನು ಬಿಟ್ಟು ಬಿಟ್ಟನು, ತಂದೆಗೆ ಅಭ್ಯಾಸವಾಗಿಬಿಟ್ಟಿತು. ಅಂದರೆ ಯಾವುದನ್ನು ಅಭ್ಯಾಸ ಮಾಡಿಕೊಂಡರೆ ಅದೇ ಆಗಿ ಬಿಡುತ್ತಾರೆ. ಹಾಗೆಯೇ ಎಲ್ಲದಕ್ಕಿಂತಲೂ ಶ್ರೇಷ್ಠನಾದಂತಹ ಪರಬ್ರಹ್ಮನೊಂದಿಗೆ ನಾವು ಇರುವಾಗ ನಾವೂ ಪರಬ್ರಹ್ಮರಾಗುತ್ತೇವೆ. ಆತನೊಂದಿಗೆ ಇರುವುದಕ್ಕಾಗಿಯೇ ಆತನ ಲಕ್ಷಣಗಳನ್ನು ಈಗ ತಿಳಿದುಕೊಳ್ಳುತ್ತಿದ್ದೇವೆ.

ಇನ್ನೂ ಇದಕ್ಕಿಂತಲೂ ತಿಳಿದುಕೊಳ್ಳಬೇಕಾದದ್ದು, ಮಾಡಬೇಕಾದದ್ದು ಕೂಡಾ ಏನು ಇಲ್ಲ. ಯಾವ ಜನ್ಮಗಳಲ್ಲಿ ಮಾಡಿಕೊಂಡ ಪುಣ್ಯವೇ, ಪತ್ರೀಜಿಯವರ ಮಾರ್ಗದೊಳಗೆ ಬಂದು, ಮತ್ತೆ ಈ ಸಾಧನೆಯನ್ನು ನೀವು ಮಾಡುತ್ತಿದ್ದೀರಿ. ಇದು ಅಷ್ಟು ಸುಲಭವಲ್ಲ, ಎಷ್ಟೋ ಅರ್ಹತೆ ಇರಬೇಕು, ಆ ಅರ್ಹತೆಯನ್ನು ನೀವು ಸಂಪಾದಿಸಿಕೊಂಡಿದ್ದೀರಿ.

ಆದ್ದರಿಂದ ಶಂಕರಾಚಾರ್ಯರು ಹೇಳಿದ ಆ ಪರಬ್ರಹ್ಮವೊಂದರ ಲಕ್ಷಣಗಳ ಕುರಿತು ಮತ್ತಷ್ಟು ವಿಷಯಗಳನ್ನು ಈಗ ತಿಳಿದುಕೊಳ್ಳೋಣ.

** ** **

## 07

**"ಬೇರೆ ಮಾಡುವ ವಿಧಾನದಿಂದ ಇದು ಅಲ್ಲ, ಇದು ಅಲ್ಲ ಎಂದು ಅಸತ್ ವಸ್ತುಗಳನ್ನು (ಅಂದರೆ ಅಸತ್ಯವಾದ ವಸ್ತುಗಳನ್ನು) ಬೇರೆ ಮಾಡಿದ ನಂತರ, ಯಾವುದಾದರೆ ವೇದಾಂತ ಶಾಸ್ತ್ರದಿಂದ ಸೂಚಿಸಲ್ಪಟ್ಟಿದೆಯೋ ಅದೇ ಬ್ರಹ್ಮ. ಅಷ್ಟೇ ಅಲ್ಲ, ಯಾವುದಾದರೆ ದ್ವಯವಾಗದೋ (ಎರಡಾಗದೋ) ನಿರಂತರವು ಆನಂದ ಸ್ವರೂಪವಾದದ್ದೋ, ಏಕವಾದದ್ದೋ ಅದು ಬ್ರಹ್ಮವೆಂದು ತಿಳಿದುಕೊಳ್ಳಬೇಕು"**

'ಬೇರೆ ಮಾಡುವ ವಿಧಾನದಿಂದ' ಎಂದಿದ್ದಾರೆ ಅವರು, ಅಂದರೆ ಯಾವುದನ್ನು ಬೇರೆ ಮಾಡಬೇಕು? ನಿತ್ಯವಾದದ್ದು ಯಾವುದೋ, ಅನಿತ್ಯವಾದದ್ದು ಯಾವುದೋ ಬೇರೆ ಮಾಡಬೇಕು. ಸೃಷ್ಟಿಯಲ್ಲಿ ನಿತ್ಯವಾದದ್ದು ಇದೆ, ಅನಿತ್ಯವಾದವೂ ಇವೆ. ಮಾನವರಿಗೆ ಯಾವುದು ನಿತ್ಯವಾದದ್ದೋ, ಯಾವುದು ಅನಿತ್ಯವಾದದ್ದೋ ತಿಳಿಯದಿರುವುರಿಂದ ಅನಿತ್ಯವಾದವುಗಳನ್ನೇ ಆಶ್ರಯಿಸಿ ಕೊನೆಗೆ ನಿರಾಶೆ ಹೊಂದುತ್ತಿದ್ದಾರೆ, ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ.

ಅದನ್ನು, ಇದನ್ನು ಬೇರೆ ಮಾಡುವ ಆ ಜ್ಞಾನ ಇಲ್ಲ. ಅದಕ್ಕೆ ಕೊನೆಗೆ ನಿರಾಶೆಪಡುತ್ತಾರೆ. ಅದಕ್ಕೆ ನಿತ್ಯ ಅನಿತ್ಯ ವಸ್ತು ವಿವೇಕವಿರಬೇಕು ಎಂದು ಸಾಧನಾ ಚತುಷ್ಟಯದಲ್ಲಿ ಶಂಕರಾಚಾರ್ಯರು ಹೇಳಿದ್ದಾರೆ. ಮತ್ತೆ ಯಾವುದು ನಿತ್ಯವಾದದ್ದು ಅಂದರೆ, ಯಾವುದು ಶಾಶ್ವತವಾದದ್ದೋ, ಯಾವಾಗಲೂ ಇರುತ್ತದೋ, ಬದಲಾವಣೆ ಹೊಂದುವುದಿಲ್ಲವೋ, ಕಾಲ ಬದಲಾದರೂ, ಯುಗಗಳು ಬದಲಾದರೂ ಬದಲಾಗದೋ ಅದೇ ನಿತ್ಯವಾದದ್ದು. ಯಾವುದು ಅನಿತ್ಯವಾದದ್ದು ಅಂದರೆ? ಯಾವುದು ಶಾಶ್ವತವಾಗಿ ಇರುವುದಿಲ್ಲವೋ, ಬದಲಾವಣೆ ಹೊಂದುತ್ತಾ ಇರುತ್ತದೋ, ಯಾವಾಗಲೂ ಇರುವುದಿಲ್ಲವೋ, ಕಾಲವು ಬದಲಾಗುತ್ತಿದ್ದರೆ, ಬದಲಾಗುತ್ತಾ ಇರುತ್ತದೋ ಅದು ಅನಿತ್ಯವಾದದ್ದು.

ಇದನ್ನು ತಿಳಿಯದೆ ಮಾನವರು ಅನಿತ್ಯವಾದವುಗಳನ್ನೇ ನಿತ್ಯವೆಂದು ಕೊಳ್ಳುತ್ತಾ, ಇರಲಾರದವೇ ಇರುವಂತಹವು ಎಂದುಕೊಳ್ಳುತ್ತಾ ಅವುಗಳ ಹಿಂದೆಯೇ ಓಡುತ್ತಿದ್ದಾರೆ. ಅವುಗಳಿಗಾಗಿಯೇ ಹಾತೊರೆಯುತ್ತಿದ್ದಾರೆ, ಅವುಗಳನ್ನು ಸಂಪಾದಿಸಿ ಕೊಳ್ಳುವುದಕ್ಕಾಗಿಯೇ ಪ್ರಯತ್ನಿಸುತ್ತಿದ್ದಾರೆ. ಅವುಗಳನ್ನು ಸಂಪಾದಿಸಿಕೊಂಡು ಸಂಭ್ರಮಿಸುತ್ತಿದ್ದಾರೆ.

ಆದ್ದರಿಂದ ಈ ಬ್ರಹ್ಮವನ್ನು, ಬ್ರಹ್ಮವಲ್ಲವೆಂದು ಬೇರೆ ಮಾಡುವ ವಿಧಾನದಿಂದ ತಿಳಿದುಕೊಳ್ಳಬೇಕು. ಅದಕ್ಕೆ ಮಾರ್ಗವೂ ಕೂಡಾ ಅವರು ಹೇಳಿದ್ದಾರೆ. ಇದು ಅಲ್ಲ, ಇದು ಅಲ್ಲ ಎಂದು ಅಶಾಶ್ವತ ವಸ್ತುಗಳನ್ನು ಅಂದರೆ ಶಾಶ್ವತವಲ್ಲದ ವಸ್ತುಗಳನ್ನು ಒಂದೊಂದನ್ನು ನಾವು ಬೇರೆ ಮಾಡಿದರೆ ಯಾವುದಾದರೆ ಇರುತ್ತದೋ ಅದೇ ಬ್ರಹ್ಮವೆಂದಿದ್ದಾರೆ.

ಒಂದು ಬಾರಿ ಆಲೋಚಿಸಿರಿ, ನಿಮ್ಮ ಶರೀರವನ್ನೇ ತೆಗೆದುಕೊಂಡರೆ ಅದು ಶಾಶ್ವತವೇ? ಅಂದರೆ ಅಲ್ಲ ಎಂದು ನಾವೇ ಹೇಳುತ್ತೇವೆ. ಏಕೆಂದರೆ ನಮ್ಮ ತಂದೆ–ತಾಯಿಗಳೇ ಅಲ್ಲ, ತಾತಂದಿರು, ಮುತ್ತಾತಂದಿರೇ ಅಲ್ಲ, ಎಷ್ಟೋ ಜನ ಭೂಮಿಗೆ ಬಂದರು ಮತ್ತೆ ನಿಷ್ಕ್ರಮಿಸಿದರು. ನಾವಾದರೂ ಸರಿ, ಕೆಲವು ದಿನಗಳೇ ಇರುತ್ತೇವೆ, ನಂತರ ನಿಷ್ಕ್ರಮಿಸುತ್ತೇವೆ.

ಅಷ್ಟೇ ಏಕೆ ನಾವು ಜನಿಸಿದಾಗ ಚಿಕ್ಕ ಮಕ್ಕಳಾಗಿದ್ದೆವು. ಆದರೆ ಕಾಲವು ಕಳೆದಂತೆ ಈ ಶರೀರವು ಬದಲಾಗುತ್ತಲೇ ಇರುತ್ತದೆ. ಮೊದಲು ಬಾಲ್ಯದ ಹಂತವು ಬರುತ್ತದೆ, ನಂತರ ಯೌವ್ವನವು ಬರುತ್ತದೆ, ನಂತರ ಕೌಮಾರ್ಯದ ಹಂತ ಬರುತ್ತದೆ, ನಂತರ ವಾರ್ಧ್ಯಕ್ಯದ ಹಂತ ಬರುತ್ತದೆ, ಕೊನೆಗೆ ಈ ಶರೀರವು ಅದೃಶ್ಯವಾಗಿ ಬಿಡುತ್ತದೆ. ಅಂದರೆ ಈ ಶರೀರವೆಂಬುದು ಶಾಶ್ವತವಾದದ್ದು ಅಲ್ಲ. ಆದ ಕಾರಣ ಶಾಶ್ವತವಲ್ಲದ ಈ ಶರೀರವು ಬ್ರಹ್ಮವಲ್ಲವೆಂಬುದು ಅರ್ಥವಾಗುತ್ತದೆ.

ಮತ್ತೆ, ಶರೀರವಲ್ಲದೆ ಇನ್ನೇನಿವೆ? ಅಂದರೆ ಮನಸ್ಸಿದೆ, ಬುದ್ಧಿ ಇದೆ. ನೀವು ಗಮನಿಸಿರಿ, ಆತ್ಮವು ನಿಷ್ಕ್ರಮಿಸಿದಂತವರಿಗೆ ಮನಸ್ಸು ಕೆಲಸ ಮಾಡುತ್ತಾ? ಅಂದರೆ ಮನಸ್ಸು ಕೆಲಸ ಮಾಡದು. ಆತ್ಮವಿರುವಾಗಲೇ ಮನಸ್ಸು ಕೆಲಸ ಮಾಡುತ್ತದೆ. ಆತ್ಮವಿಲ್ಲದಿದ್ದರೆ ಮನಸ್ಸು ಕೆಲಸ ಮಾಡದು. ಆದ್ದರಿಂದ ಮನಸ್ಸು ಕೂಡಾ ಬ್ರಹ್ಮವಲ್ಲ. ಹಾಗೆಯೇ ಬುದ್ಧಿ ಕೂಡಾ. ಆತ್ಮವಿದ್ದರೆ ಎಲ್ಲಾ ಆಲೋಚಿಸಬಲ್ಲರು, ಎಲ್ಲಾ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲರು. ಆತ್ಮ ಪಕ್ಕಕ್ಕೆ ಸರಿದರೆ, ಅಂದರೆ ನಾವು ನಿಷ್ಕ್ರಮಿಸಿದರೆ ಯಾವುದು ಕೆಲಸ ಮಾಡದು. ಅಂದರೆ ಬುದ್ಧಿ ಕೂಡಾ ಬ್ರಹ್ಮವಲ್ಲವೆಂದು ತಿಳಿದುಕೊಳ್ಳಬೇಕು.

ಶಂಕರಾಚಾರ್ಯರು ಬೋಧಿಸಿದ ನಿರ್ವಾಣ ಷಟ್ಕನ್ನು ಒಂದುಬಾರಿ ಓದಿದರೆ ನಿಮಗೆ ಇದೆಲ್ಲಾ ಚೆನ್ನಾಗಿ ಅರ್ಥವಾಗುತ್ತದೆ. ಬಹಳ ವಿವರಣೆಯಿಂದ ನಿರ್ವಾಣ ಷಟ್ಕದಲ್ಲಿ, ಆರು ಶ್ಲೋಕಗಳಲ್ಲಿ ಇವನ್ನೆಲ್ಲಾ ಕೊಡಲಾಗಿದೆ. ಇದು ನಾನಲ್ಲ, ಇದು ನಾನಲ್ಲ, ಇದು ನಾನಲ್ಲ, ಆ ಶಿವನೇ, ಆ ಬ್ರಹ್ಮವೇ ನಾನು ಎಂದು ಅದರಲ್ಲಿ ಅವರು ವಿವರಿಸಿದ್ದಾರೆ.

ಆದ್ದರಿಂದ ಅದನ್ನು ಚೆನ್ನಾಗಿ ಓದಿ ಅರ್ಥ ಮಾಡಿಕೊಂಡರೆ ಬ್ರಹ್ಮವೊಂದರ ಶ್ರೇಷ್ಠತೆಯು ನಮಗೆ ತಿಳಿಯುತ್ತದೆ. ಈ ನಿರ್ವಾಣ ಷಟ್ಕವನ್ನು ಏಕೆ ಅರ್ಥ ಮಾಡಿಕೊಳ್ಳಬೇಕು? ಅಂದರೆ ಆ ಸ್ಥಿತಿಗೆ ಬಂದವನೇ ಏನೂ ನಾನಲ್ಲ, ಏನು ನನಗೆ ಸಂಬಂಧವಿಲ್ಲ, ಎಂದು ತಿಳಿದುಕೊಂಡವನೇ ಬ್ರಹ್ಮವಾಗುತ್ತಾನೆ.

ನೀವು ಆ ಸ್ಥಿತಿಗೆ ಬಂದಿದ್ದೀರಿ ಅಂದರೆ ಮೋಕ್ಷವನ್ನು ಹೊಂದಿದಂತೆಯೇ ಆ ನಿರ್ವಾಣ ಷಟ್ಕದಲ್ಲಿ ಯಾವಾದರೆ ಉದಾಹರಿಸಲ್ಪಟ್ಟಿದೆಯೋ, ಅವುಗಳಲ್ಲಿ ಯಾವುದು ನಾನು ಅಂದುಕೊಂಡರೂ ಕೂಡಾ, ನಾನು ಎನ್ನುವಂತೆ ನೀವು ಜೀವಿಸಿದರೂ ಕೂಡಾ ನೀವು ಇನ್ನೂ ನಿರ್ವಾಣ ಸ್ಥಿತಿಯನ್ನು ಹೊಂದಿಲ್ಲವೆಂದೇ ಲೆಕ್ಕ. ಅದರಲ್ಲಿ ಬೋಧಿಸಿದವೆಲ್ಲಾ ಅಸತ್ಯವಾದವೇ. ಅವೆಲ್ಲವನ್ನು ಒಂದೊಂದಾಗಿ ತೆಗೆದು ಹಾಕಿದರೆ ಕೊನೆಗೆ ಉಳಿಯುವುದು ಬ್ರಹ್ಮವೇ (ಆತ್ಮವೇ).

ಹಾಗೆಯೇ ಯಾವುದನ್ನಾದರೆ ಈ ವೇದಾಂತ ಶಾಸ್ತ್ರ ಅಂದರೆ ಉಪನಿಷತ್ತುಗಳು ಸೂಚಿಸಿವೆಯೋ ಅಂದರೆ ಬೋಧಿಸಿವೆಯೋ ಅದೇ ಬ್ರಹ್ಮವು.

ಇನ್ನು ಏನು ಹೇಳಿದ್ದಾರೆಂದರೆ "ಎರಡಾಗದ್ದು" ಎಂದಿದ್ದಾರೆ. ಅಂದರೆ ಎರಡಾಗಿ ಇಲ್ಲದ್ದು. ದೃಢವಾಗಿ ಮಾತನಾಡಿದರೆ ಈ ಸೃಷ್ಟಿಯಲ್ಲಿ ಬ್ರಹ್ಮಕ್ಕಿಂತ ಬೇರೆಯಾಗಿ ಎರಡನೆಯದು ಇಲ್ಲ. ಎಷ್ಟೋ ಇವೆ ಎಂದುಕೊಳ್ಳುತ್ತೇವೆ. ಯಾವುದೂ ಇಲ್ಲವೆಂಬುದನ್ನು ತಿಳಿದುಕೊಳ್ಳಬೇಕು.

ಇದನ್ನು ತಿಳಿದುಕೊಂಡರೆ ಇರಲಾರದಂತವುಗಳಿಗೆ ಪ್ರಾಮುಖ್ಯತೆ ಕೊಡುವುದಿಲ್ಲ. ಇರಲಾರದಂತವುಗಳಿಗೆ ಕುರಿತು ಆಲೋಚಿಸರು, ಇರುವ ಬ್ರಹ್ಮನ ಕುರಿತೇ ಆಲೋಚಿಸುತ್ತಾರೆ, ನಿರಂತರವೂ ಆನಂದ ಸ್ಥಿತಿಯಲ್ಲಿ ಇರುತ್ತಾರೆ. ಕಾರಣವೇನೆಂದರೆ? ಆ

ಬ್ರಹ್ಮವೊಂದರ ಸ್ವರೂಪವೇ ಆನಂದ. ನಿತ್ಯವೂ ಆನಂದ ಅಂತ್ಯವಿಲ್ಲದ ಆನಂದ, ಅನಿರ್ವಚನೀಯವಾದ ಆನಂದ. ನಾವು ಈ ಸ್ಥಿತಿಯನ್ನು ಧ್ಯಾನ ಸ್ಥಿತಿಯಲ್ಲಿ ಹೊಂದುತ್ತಿದ್ದೇವೆ.

ನೀವು ನೋಡಿ, ಧ್ಯಾನವನ್ನು ಮಾಡುತ್ತಿರುವಾಗ ಮೊದಲು ಕಣ್ಣುಗಳನ್ನು ಮುಚ್ಚಿಕೊಳ್ಳುತ್ತೇವೆ. ಅಲ್ಲಿ ಶರೀರದ ಪ್ರಜ್ಞೆ ಇರುವುದಿಲ್ಲ. ಕಣ್ಣು ಮುಚ್ಚಿದೊಡನೆ ಆಲೋಚನೆಗಳು ಬರುತ್ತವೆ. ಇಲ್ಲಿ ಆಲೋಚಿಸುವುದು ಮನಸ್ಸು ಅಂದರೆ ಮನಸ್ಸಿನ ಜೊತೆ ಇರುತ್ತೇವೆ. ಆ ಮನಸ್ಸಿನಲ್ಲಿ ಅಲೋಚನೆಗಳು ಬಂದಾಗ ಅವುಗಳನ್ನು ಕಟ್ ಮಾಡಿ "ಶ್ವಾಸದ ಮೇಲೆ ಗಮನ" ಇಡುತ್ತೇವೆ. ಹಾಗೆ ಇಡುತ್ತಾ, ಇಡುತ್ತಾ ನಿಧಾನ, ನಿಧಾನವಾಗಿ ಆಲೋಚನೆಗಳೆಲ್ಲಾ ನಿಂತುಬಿಡುತ್ತವೆ. ಯಾವಾಗಾದರೆ ಆಲೋಚನೆಗಳು ನಿಂತು ಬಿಟ್ಟವೋ ಇನ್ನು ಅಲ್ಲಿ ಮನಸ್ಸು ಕೂಡಾ ಇರುವುದಿಲ್ಲ, ಅಂದರೆ ಇರುವುದು ಆತ್ಮ ಅಂದರೆ ಬ್ರಹ್ಮವು.

ನೀವು ಗಮನಿಸಿದರೆ ಆ ಸ್ಥಿತಿಯಲ್ಲಿ ನೀವಿರುವಾಗ ನಿಮಗೆ ಗಂಟೆಗಳು ನಿಮಿಷಗಳಂತೆ ಕಳೆದು ಬಿಡುತ್ತವೆ. ಆ ಸ್ಥಿತಿಗೆ ಬರದಿದ್ದರೆ ನಿಮಿಷಗಳು ಗಂಟೆಗಳಾಗಿ ಕಳೆಯುತ್ತವೆ. ಅದಕ್ಕೆ ನೀವು ನೋಡಿ ಆ ಸ್ಥಿತಿಯಲ್ಲಿ ಮೂರು ಗಂಟೆಗಳು, ನಾಲ್ಕು ಗಂಟೆಗಳು ಕುಳಿತರೂ, ಐದು ಗಂಟೆಗಳು ಕುಳಿತರೂ ಐದು ನಿಮಿಷಗಳು ಕುಳಿತಂತೆ ಇರುತ್ತದೆ.

ಮತ್ತೆ ನಮ್ಮ ಭೀಮವರಂ ಕ್ಲಾಸ್‌ನಲ್ಲಿ ಎಷ್ಟೋ ಜನರು ಬರುತ್ತಿದ್ದಾರೆ. ಅಲ್ಲಿರುವ ಶಿಸ್ತಿನಿಂದ ಕೂಡಿದ ವಾತಾವರಣದಲ್ಲಿ ಧ್ಯಾನವನ್ನು ಮಾಡುವುದರಿಂದ ಆ ಸ್ಥಿತಿಗೆ ಸೇರಿಕೊಳ್ಳುವುದರಿಂದ ಎಷ್ಟು ಗಂಟೆಗಳು ಕುಳ್ಳಿರಿಸಿದರೂ ಅವರಿಗೆ ಕುಳಿತಂತೆ ಇರುವುದಿಲ್ಲ. ಕಾರಣವೇನೆಂದರೆ? ಅಲ್ಲಿ ಇನ್ನೊಂದು ದೃಷ್ಟಿ ಇಲ್ಲ. ಮನಸ್ಸು ಇನ್ನೊಂದರ ಮೇಲೆ ಹೋಗದು. ವಿಷಯವನ್ನು ಕೇಳುತ್ತಾರೆ, ಧ್ಯಾನವನ್ನು ಮಾಡುತ್ತಾರೆ, ಭೋಜನ ಮಾಡುತ್ತಾರೆ ಇನ್ನೊಂದರ ಮೇಲೆ ದೃಷ್ಟಿ ಹೊರಳುವ ಅವಕಾಶವೇ ಇಲ್ಲ.

ಆ ರೀತಿಯಲ್ಲಿ ಅಲ್ಲಿರುವುದರಿಂದ ಮೂರು ದಿನಗಳು ಆದಂತೆಯೂ ಕೂಡಾ ತಿಳಿಯದು. ಬಹಳಷ್ಟು ಜನರು ಅಂದುಕೊಳ್ಳುತ್ತಾರೆ ಅಲ್ಲಿ ಮೂರು ದಿನಗಳು ಏನು ಕೇಳುತ್ತೀರಿ? ಏನು ಕುಳಿತುಕೊಳ್ಳುತ್ತೀರಿ? ಎಂದು. ಆದರೆ ಭೀಮವರಂನಲ್ಲಿ ಕುಳಿತವರಿಗೆ ತಿಳಿಯುತ್ತದೆ. ಹೊಸಬರು ಯಾರಾದರೂ ಬಂದರೆ ಮೊಟ್ಟ ಮೊದಲನೆ ದಿನ ಸ್ವಲ್ಪ ತೊಂದರೆ ಪಡಬಹುದು. ಆದರೆ ಎರಡನೆಯ ದಿನದಂದು ಯಾರೂ ಲೆಕ್ಕ ಮಾಡುವುದಿಲ್ಲ.

ಮತ್ತೆ ಹಾಗೆ ಇರುವುದಕ್ಕೆ ಕಾರಣವೇನೆಂದರೆ ಈ ಅನಿತ್ಯವಾದ, ಅಶಾಶ್ವತವಾದ ದೇಹದೊಂದಿಗೆ ಇರುವುದಿಲ್ಲ, ಮನಸ್ಸಿನೊಂದಿಗೂ ಇರುವುದಿಲ್ಲ. ಬ್ರಹ್ಮದೊಂದಿಗೆ

ಇರುತ್ತಾರೆ, ಆನಂದದಲ್ಲಿರುತ್ತಾರೆ. ಅದಕ್ಕೆ ಇಲಿಯವರೆಗೆ ಎಷ್ಟೋ ಜನ ವರ್ಷಗಳಿಂದ ಬಿಡದೇ ಭೀಮವರಂಗೆ ಬರುತ್ತಿದ್ದಾರೆ. ಏಕೆ ಬರುತ್ತಿದ್ದರೆ? ಆ ಆನಂದವನ್ನು ಹೊಂದುವುದಕ್ಕೆ, ಜೀವನದಲ್ಲಿ ಅಂತಹ ಆನಂದವನ್ನು ಎಂದೂ ಹೊಂದಿರುವುದಿಲ್ಲವಾದ್ದರಿಂದ, ಅಲ್ಲಿ ಮಾಡುವ ಈ ಧ್ಯಾನದಲ್ಲಿ ಆನಂದವನ್ನು ಹೊಂದುತ್ತಿದ್ದಾರೆ, ಆದ್ದರಿಂದ ಎಷ್ಟೋ ನೂರಾರು ಜನರು ಬಿಡದೇ, ತಪ್ಪದೇ ಬರುತ್ತಿದ್ದಾರೆ. ಆದಕಾರಣ ಆ ಬ್ರಹ್ಮವು ಆನಂದ ಸ್ವರೂಪವೆಂದು ತಿಳಿದುಕೊಳ್ಳಬೇಕು.

ಅಷ್ಟೇ ಅಲ್ಲ "ಏಕವಾದದ್ದೋ" ಎಂದಿದ್ದಾರೆ. ಅಂದರೆ ಎರಡಾಗಿ ಇರುವುದಿಲ್ಲ. ಒಂದೇ, ಬ್ರಹ್ಮವಲ್ಲದೇ ಇನ್ನೊಂದು ವಸ್ತುವನ್ನು ತೋರಿಸಲಾರೆವು. ಶಾಶ್ವತವಾದದ್ದನ್ನು ಇನ್ನೊಂದನ್ನು ತೋರಿಸಲಾರೆವು. ಅಸಾಧ್ಯ! ನಿಜವಾಗಿ ಇದ್ದರಲ್ಲವೆ?.

ಆದಕಾರಣ ನಾವೆಲ್ಲರೂ ಕೂಡಾ ಬಹಳ ಅದೃಷ್ಟವಂತರು. ಆ ಬ್ರಹ್ಮವನ್ನು ಆಶ್ರಯಿಸುತ್ತಿದ್ದೇವೆ, ಬ್ರಹ್ಮವನ್ನು ತಿಳಿದುಕೊಳ್ಳುವುದಕ್ಕೆ, ಆ ಬ್ರಹ್ಮ ಸ್ಥಿತಿಯಲ್ಲಿ ಇರುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದು ಎಲ್ಲರಿಗೂ ಸಾಧ್ಯವಿಲ್ಲ, ನಮಗೆ ಸಾಧ್ಯವಾಗಿದೆ ಎಂದರೆ ಎಷ್ಟೋ ಅದೃಷ್ಟವಂತರು. ಒಂದು ರೀತಿಯಾಗಿ ಹೇಳಬೇಕೆಂದರೆ ಪೂರ್ವ ಜನ್ಮದ ಸುಕೃತ ಇರಬೇಕಾದದ್ದೇ.

ಲೋಕದಲ್ಲಿ ಕೋಟಿಗಟ್ಟಲೆ ಜನರಿರಬಹುದು ಆದರೆ ಬ್ರಹ್ಮದ ಮೇಲೆ ಆಸಕ್ತಿಯನ್ನು ತೋರಿಸುವವರು ಅಂದರೆ ಆತ್ಮನ ಮೇಲೆ, ಆತ್ಮ ಜ್ಞಾನದ ಮೇಲೆ ಆಸಕ್ತಿಯನ್ನು ತೋರಿಸುವವರು ಅತಿ ಕಡಿಮೆ ಜನರಿರುತ್ತಾರೆ. 350 ರಿಂದ 360 ಜನ್ಮಗಳನ್ನು ದಾಟಿದವರೆ ಆಸಕ್ತಿಯನ್ನು ತೋರಿಸಬಲ್ಲರು, ಆ ಕೆಲವು ಜನರಲ್ಲಿ ಇರುವಂತವರೇ ನಾವೆಲ್ಲಾ.

ಹೀಗೆ ಅಷ್ಟು ಶ್ರೇಷ್ಠವಾದ ಬ್ರಹ್ಮನ ಕುರಿತು ಪ್ರತಿ ವಿಷಯವನ್ನು ಕೂಡಾ ಶಂಕರಾಚಾರ್ಯರು ಎಷ್ಟೋ ವಿಫುಲವಾಗಿ ವಿವರಿಸಿದ್ದಾರೆ. ಆತನು ತಿಳಿದುಕೊಂಡನು, ಅದನ್ನೇ ನಮಗೆ ಬೋಧಿಸಿದನು. ನಾವು ತಿಳಿದುಕೊಳ್ಳಬೇಕು, ಆತನ ಹಾಗೆ ಸಾಧಿಸಬೇಕು, ನಾವೂ ಶ್ರೇಷ್ಠರಾಗಬೇಕು. ಬ್ರಹ್ಮದೊಂದಿಗೆ ಇದ್ದಾಗ ಕೊನೆಗೆ ಅವನೂ ಕೂಡಾ ಬ್ರಹ್ಮವೇ ಆಗಿ ಬಿಡುತ್ತಾನೆ. ಅಂತಹವರನ್ನು ಲೋಕದಲ್ಲಿ ದೇವರುಗಳೆಂದು ಕರೆಯುತ್ತಾರೆ. ಅಂತಹವರಿಗೆ ಗುಡಿಗಳನ್ನು ಕಟ್ಟುತ್ತಾರೆ, ಆರಾಧನೆಗಳನ್ನು ಮಾಡುತ್ತಾರೆ, ಎಷ್ಟೋ ಮಾಡುತ್ತಿರುತ್ತಾರೆ.

ಅಂದರೆ ಇಲ್ಲಿ ಸೃಷ್ಟಿಯಲ್ಲಿ ಅಸತ್ಯವು, ಸತ್ಯವು ಎರಡೂ ಸೇರಿ ಇವೆ. ವಾಸ್ತವವು, ಅವಾಸ್ತವವೂ ಎರಡೂ ಸೇರಿ ಇರುತ್ತವೆ. ರಾಕ್ಷಸರು, ದೇವತೆಗಳು ಬೆರೆತೇ ಇರುತ್ತಾರೆ. ಎಲ್ಲಾ ಬೆರೆತು ಇರುವುದೇ ಈ ಸೃಷ್ಟಿ ಈ ಪ್ರಪಂಚ.

** ** **

## 08

**"ಯಾವುದನ್ನು ನೋಡಿದರೆ ಇತರ ಬೇರೇನನ್ನೂ ನೋಡಬೇಕಾದ ಅಗತ್ಯವಿಲ್ಲವೋ, ಯಾವುದನ್ನು ಹೊಂದಿದರೆ ಪುನಃ ಜನ್ಮಿಸಬೇಕಾದ ಅಗತ್ಯವಿಲ್ಲವೋ, ಯಾವುದನ್ನು ತಿಳಿದುಕೊಂಡರೆ ಇತರದ್ದಾದ ಯಾವುದನ್ನು ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲವೋ ಅದೇ ಬ್ರಹ್ಮವೆಂದು ತಿಳಿದುಕೊಳ್ಳಬೇಕು"**

ನೋಡಿರಿ, ಈ ಸೃಷ್ಟಿಯಲ್ಲಿ ಎಷ್ಟೋ ರೀತಿಯ ಅದ್ಭುತಗಳು, ವಿಶೇಷಗಳು ಇವೆ. Youtube ನಲ್ಲಿ ನೋಡಿದರೆ ಸಮುದ್ರದಲ್ಲಿ ಇರುವಂತವು ಗುಡ್ಡಗಳಲ್ಲಿ ಇರುವಂತವು, ಹಿಮಪರ್ವತಗಳಿರುವಂತವು, ಸುಂದರವಾದ ದೃಶ್ಯಗಳನ್ನು ತೋರಿಸುತ್ತಾ ಇರುತ್ತಾರೆ. ಪ್ರತ್ಯೇಕವಾಗಿ ಹೋಗಿ ವಿವಿಧ ರೀತಿಯ ನಗರಗಳನ್ನೆಲ್ಲಾ ತೋರಿಸುತ್ತಾ ಇರುತ್ತಾರೆ.

ಅದಕ್ಕೆ ನಮ್ಮವರು ಕೂಡಾ ನೋಡಿ, ಎಲ್ಲೆಲ್ಲಿಗೋ ಈ ಟೂರ್‌ಗೆ ಹೋಗಿ ನೋಡಿಕೊಂಡು ಬರುತ್ತಿರುತ್ತಾರೆ. ಹೀಗೆ ನೋಡುತ್ತಿದ್ದರೆ ಎಷ್ಟು ಇರುತ್ತವೆ ಪ್ರಪಂಚದಲ್ಲಿ ! ಎಷ್ಟು ನೋಡಬೇಕು! ಹಾಗೆ ಜನ್ಮ ಜನ್ಮಗಳಿಂದ ನೋಡುತ್ತಲೇ ಇದ್ದಾರೆ. ಆದರೆ ಇನ್ನು ನೋಡಬೇಕೆಂದು ಅನಿಸುತ್ತಲೇ ಇರುತ್ತದೆ.

ಆದರೆ ಶಂಕರಾಚಾರ್ಯರು ಏನು ಹೇಳಿದ್ದಾರೆಂದರೆ? ಯಾವುದನ್ನು ನೋಡಿದರೆ ಇತರ ಬೇರೆ ಯವುದನ್ನು ನೋಡಬೇಕಾದ ಅಗತ್ಯವಿಲ್ಲವೋ ಅದೇ ನೋಡಬೇಕೆಂದಿದ್ದಾರೆ, ಕಾರಣ ಅದೇ ಪರಬ್ರಹ್ಮ. ಆ ಪರಬ್ರಹ್ಮನನ್ನು ನೋಡುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಇನ್ನು ಈ ಪ್ರಪಂಚವೆಲ್ಲಾ ತಿರುಗುವ ಅಗತ್ಯವಿಲ್ಲ, ದೇಶ ದೇಶಗಳನ್ನು ತಿರುಗಬೇಕಿಲ್ಲ, ಈ ಮೂಲೆಗೆ ಹೋಗಿ, ಆ ಮೂಲೆಗೆ ಹೋಗಿ ಏನೂ ನೋಡಬೇಕಾಗಿಲ್ಲ, ಸಮಸ್ತವೂ ಆತನಲ್ಲಿಯೇ ಇವೆ.

ಆತನನ್ನು ನೋಡಿದರೆ ಎಲ್ಲವನ್ನು ನೋಡಿದಂತೆಯೇ. ಅದಕ್ಕೆ ನಮ್ಮ ಮೇಡಂ ಅಮೇರಿಕಾಗೆ ಬಾ ಎಂದರೆ ನೀವು ಬೇಕಾದರೆ ಹೋಗಿ, ನಾನು ಹೋಗುವುದಿಲ್ಲ ಅಂದಳು. ನ್ಯಾಯವಾಗಿ ಯಾರಾಗಲಿ ಅಮೇರಿಕಾಗೆ ಹೋಗುವೆಯಾ ಅಂದರೆ ಎಲ್ಲಾ ನೋಡಬಹುದೆಂದು ಹೋಗುತ್ತೇನೆ ಎನ್ನುತ್ತಾರೆ. ಏನಿದೇರಿ! ಅಲ್ಲಿ! ಇಷ್ಟು ಕಷ್ಟ ಪಟ್ಟು ಹೋಗುವ ಬದಲು ಶರೀರದಲ್ಲಿರುವ ಆ ಪರಬ್ರಹ್ಮನನ್ನು ನೋಡಿರಿ, ನೀವು ಸಮಸ್ತವನ್ನು ನೋಡಿದವರಾಗುತ್ತೀರಿ.

ಎಲ್ಲೆಲ್ಲಿಯವೊ ನೋಡುವುದಕ್ಕೆ ಸಾವಿರಾರು, ಲಕ್ಷಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ, ಎಷ್ಟೋ ಕಷ್ಟಪಡುತ್ತಾರೆ. ಆ ಬೆಟ್ಟವನ್ನು ಹತ್ತಿ ಅದನ್ನು ನೋಡಬಹುದು, ಈ ಬೆಟ್ಟವನ್ನು ಹತ್ತಿದರೆ ಅದನ್ನು ನೋಡಬಹುದೆಂದು ಹಂಬಲಿಸುತ್ತಿದ್ದಾರೆ. ನಿಮ್ಮ

ಶರೀರದೊಳಗೆ ಹೋಗಿರಿ, ಎಲ್ಲವನ್ನು ನೋಡಬಹುದು. ಶ್ರೀಕೃಷ್ಣ ಭಗವಾನನು ವಿಶ್ವರೂಪವನ್ನು ತೋರಿಸಿದಾಗ ಅರ್ಜುನನು ನೋಡಲಾಗದಿದ್ದಾಗ ದಿವ್ಯನೇತ್ರವನ್ನು ಕೊಟ್ಟನು. ದಿವ್ಯನೇತ್ರದಿಂದ ಆತನ ವಿಶ್ವರೂಪವನ್ನು, ಸಮಸ್ತ ವಿಶ್ವವನ್ನು, ಕೋಟ್ಯಾನು ಕೋಟಿ ಲೋಕಗಳನ್ನು, ಅವುಗಳಲ್ಲಿರುವ ಅದ್ಭುತಗಳನ್ನು, ವಿಶೇಷಗಳನ್ನು ಸಮಸ್ತವನ್ನೂ ನೋಡಿದನು ಆತ.

ಇಂತಹ ನಿನ್ನ ಶ್ರೇಷ್ಠವಾದ ರೂಪವನ್ನು ನೋಡಿದ ಮೇಲೆ ಇನ್ನೇನಿದೆ ನೋಡು–ವುದಕ್ಕೆ! ಎಲ್ಲಾ ಅದರಲ್ಲಿಯೇ ಇವೆ. ಇನ್ನೇನು ಬೇಕಾಗಿಲ್ಲ ಎಂದನು ಆತ. ನೀವು ರಾಕೆಟ್ ತೆಗೆದುಕೊಂಡು ಹೋದರೆ ಏನೋ ಕೆಲವು ಲೋಕಗಳನ್ನು ನೋಡುವೆ! ಅದೇ ನಿನ್ನ ಶರೀರದೊಳಗೆ ಹೋಗು ಕೋಟ್ಯಾನು ಕೋಟಿ ಲೋಕಗಳನ್ನು ನೋಡುವೆ. ಹೊರಗೆ ಎಲ್ಲಾ ತಿರುಗಬೇಕೆಂದು ನೋಡುತ್ತಿರುವೆಯಾಗಲಿ ಒಳಗೆ ಮಾತ್ರ ಹೋಗುವುದಿಲ್ಲ.

ಹಾಗೆಯೇ ಯಾವುದನ್ನು ಹೊಂದಿದರೆ ತಿರುಗಿ ಜನ್ಮಿಸಬೇಕಾದ ಅಗತ್ಯ ಇಲ್ಲವೋ ಅದನ್ನು ಹೊಂದಬೇಕು ಎಂದಿದ್ದಾರೆ. ಯಾರಾಗಲಿ ಯಾವುದಕ್ಕಾಗಿ ಪ್ರಯತ್ನವನ್ನು ಮಾಡಬೇಕು? ಜನ್ಮವಿಲ್ಲದಂತೆ ಇರುವ ಪ್ರಯತ್ನವನ್ನು ಮಾಡಬೇಕು. ಮತ್ತೇ ಜನ್ಮವಿಲ್ಲದಂತೆ ಇರಬೇಕು ಅಂದರೆ ಯಾವುದನ್ನು ಹೊಂದಬೇಕೋ ತಿಳಿದುಕೊಳ್ಳಬೇಕು. ಆ ಪರಬ್ರಹ್ಮನನ್ನು ಹೊಂದಿದರೆ ಇನ್ನು ನೀನು ಹೊಂದಬೇಕಾದದ್ದು ಇಲ್ಲ. ಹೀಗಾಗಿ ಒಬ್ಬ ರಮಣ ಮಹರ್ಷಿ, ಷಿರಿಡಿ ಬಾಬಾ, ಸತ್ಯಸಾಯಿಬಾಬಾ, ಪತ್ರೀಜಿಯವರು, ಯೋಗಿಗಳು, ಬಾಲ ಯೋಗಿಗಳು, ಋಷಿಗಳು, ಅವಧೂತರು ಇವೆಲ್ಲವನ್ನು ತಿಳಿದುಕೊಂಡರು. ಆ ಶರೀರದಲ್ಲಿರುವ ಆ ಪರಬ್ರಹ್ಮನನ್ನು ಹೊಂದುವ ಪ್ರಯತ್ನವನ್ನು ಇವರೆಲ್ಲಾ ಮಾಡಿದರು.

ಅದಕ್ಕೆ ಎಷ್ಟೋ ಜನರು ಬಂದು ರಮಣ ಮಹರ್ಷಿಗಳಿಗೆ ಸಾವಿರ, ಲಕ್ಷಗಳು ಕೊಡುತ್ತೇವೆಂದರು, ಎಷ್ಟೋ ಸೌಕರ್ಯವನ್ನು ಒದಗಿಸುತ್ತೇವೆಂದರೂ ಆತನು ಒಪ್ಪಲಿಲ್ಲ. ಆ ಗೋಸಿಯಿಂದ (ಗೋಚಿ)ಯಿಂದ ಏನು ರೀ! ಕೇಳಿದರೆ ಸೂಟುಗಳನ್ನು, ಬೂಟುಗಳನ್ನು ತಂದು ಕೊಡುತ್ತೇವೆ ಎಂದರೂ...... ನಾನೇನು ಮಾಡಲಿ ಮಗು, ಅವನೆಲ್ಲಾ, ನಾನು ಹೊಂದ ಬೇಕಾದದ್ದನ್ನು ಹೊಂದಿದ್ದೇನೆ. ನನಗೆ ಈ ಅಲಂಕಾರಗಳು, ಈ ಹಣ, ಘನತೆಗಳು ಬೇಕಿಲ್ಲ ಎಂದನು. ಏನು ಇದ್ದರೆ ಅದನ್ನು ತಿಂದನು, ಎಲ್ಲಿದ್ದರೆ ಅಲ್ಲಿ ಮಲಗಿದನು, ಯಾರೇನು ಅಂದುಕೊಂಡರೂ ಆತನು ಹಿಡಿಸಿಕೊಳ್ಳಲಿಲ್ಲ, ಆ ಒಂದು ಗೋಚಿಯೊಂದಿಗೇ ಆತನು ಜೀವಿಸಿ ತೋರಿಸಿದನು. ಆ ಪರಬ್ರಹ್ಮನನ್ನು ಹೊಂದಿದನು. ಇನ್ನು ಜನ್ಮವಿಲ್ಲದಂತೆ ಮಾಡಿಕೊಂಡನು.

ಷಿರಿಡಿ ಬಾಬಾರವರ ಅನುಗ್ರಹವನ್ನು ಹೊಂದಿದರೆ ಕೋಟಿಗಳನ್ನು ಸಂಪಾದಿಸಿಕೊಳ್ಳಬಹುದು ಎಂದು ಆತನು ಇಲ್ಲದಿದ್ದರೂ ವಿಗ್ರಹವನ್ನು ಇಟ್ಟು,

ಆರತಿಗಳನ್ನು ಕೊಟ್ಟು, ದುನಿ ಹಾಕಿ, ಎಷ್ಟೋ ಕೋರಿಕೆಗಳನ್ನು ಕೋರುತ್ತಿದ್ದಾರೆ. ಮತ್ತೆ ಆತನ ಸ್ವಲ್ಪ ಮಟ್ಟದ ಅನುಗ್ರಹವನ್ನು ಕೊಟ್ಟರೇನೇ ಇವರು ಕೋಟಿಗಳನ್ನು ತಂದುಕೊಳ್ಳಬಹುದು, ಭೋಗಗಳನ್ನು ಅನುಭವಿಸಬಹುದು ಅಂದುಕೊಂಡರೆ, ಮತ್ತೇ ಆತನು ಏಕೆ ಅನುಭವಿಸಲಿಲ್ಲ, ಆತನು ಹೊಂದಬೇಕಾದದ್ದನ್ನು ಹೊಂದಿದ್ದೇನೆ. ಇನ್ನೇನೂ ಬೇಕು ರೀ! ಆ ಪರಬ್ರಹ್ಮನನ್ನು ಹೊಂದಿದರು, ಆನಂತವಾದ ಆನಂದದಲ್ಲಿ ಜೀವಿಸಿದರು, ಜನ್ಮವಿಲ್ಲದ ಸ್ಥಿತಿಗೆ ಸೇರಿಕೊಂಡರು.

ಹಾಗೆಯೇ ಯಾವುದನ್ನು ತಿಳಿದುಕೊಂಡರೆ ಬೇರೆ ಯಾವದನ್ನೂ ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲವೋ ಅದನ್ನು ತಿಳಿದುಕೊಳ್ಳಬೇಕು ಎಂದರು. ಮತ್ತೆ ಯಾರನ್ನು ತಿಳಿದುಕೊಳ್ಳಬೇಕು ಅಂದರೆ ಪರಬ್ರಹ್ಮನನ್ನು ತಿಳಿದುಕೊಳ್ಳಬೇಕು. ಅವನ್ನು ಇವನ್ನು ತಿಳಿದುಕೊಳ್ಳುತ್ತಾರೆ, ಏಕೆ ಅವೆಲ್ಲಾ? ಪರಬ್ರಹ್ಮನನ್ನು ತಿಳಿದುಕೊಂಡರೆ ಇನ್ನೇನನ್ನೂ ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲ, ಸಮಸ್ತವು ಆತನ ಬಳಿ ಇವೆ.

ನಿಜವಾಗಿಯೂ ಶಂಕರಾಚಾರ್ಯರು ಹೇಳಿದ ಆ ಪರಬ್ರಹ್ಮವನ್ನು ನೋಡಬೇಕೆಂದು, ಹೊಂದಬೇಕೆಂದು, ಆತನನ್ನು ತಿಳಿದುಕೊಳ್ಳಬೇಕೆಂದು ನಾವೆಲ್ಲರೂ ಅನು ನಿತ್ಯ ಎಷ್ಟು ಗಂಟೆಗಳು ಹೀಗೆ ಕಷ್ಟಪಡುತ್ತಿದ್ದೇವೆ! ಎಷ್ಟು ಪ್ರಯತ್ನವನ್ನು ಮಾಡುತ್ತಿದ್ದೇವೆ! ಎಷ್ಟು ಅವರೋಧಗಳು, ಎಷ್ಟು ತೊಂದರೆಗಳು, ಎಷ್ಟು ಸಮಸ್ಯೆಗಳು, ಎಷ್ಟು ಅಡ್ಡಿಗಳು ಬಂದರೂ ಕೂಡಾ ಪಟ್ಟು ಬಿಡದೆ ನಾವು ಇವನೆಲ್ಲಾ ಮಾಡುತ್ತಿದ್ದೇವೆಂದರೆ ಎಷ್ಟು ಅದೃಷ್ಟವಂತರು!.

ನಿಜವಾಗಿಯೂ ಪರಬ್ರಹ್ಮನನ್ನು ಆಶ್ರಯಿಸುವ ಈ "ಶ್ವಾಸದ ಮೇಲೆ ಗಮನ" ಧ್ಯಾನವು ದೊರಕುವುದೇ ಪೂರ್ವ ಜನ್ಮದ ಸುಕೃತ, ಇಲ್ಲದಿದ್ದರೆ ಸಾಧ್ಯವಾಗದು. ಮತ್ತೆ ನಿಜವಾಗಿ ಈ ಮಾರ್ಗವನ್ನು ಒದಗಿಸಿದ ಪತ್ರೀಜಿಯವರಿಗೆ ನಾವು ಋಣಪಟ್ಟು ಇದ್ದಂತೆ. "ಶ್ವಾಸದ ಮೇಲೆ ಗಮನ"ವಿಟ್ಟರೆ ಇದರಲ್ಲಿ ಇಷ್ಟು ರಹಸ್ಯವಿದೆಯೇ ಎಂದು ಅನಿಸುತ್ತದೆ. ಎಷ್ಟು ಆಶ್ಚರ್ಯ! ಈ ಶ್ವಾಸದ ಮೇಲೆ ಗಮನದ ಮೂಲಕ ಸಮಸ್ತ ಸೃಷ್ಟಿ ರಹಸ್ಯಗಳನ್ನು ತಿಳಿದುಕೊಳ್ಳಬಲ್ಲವರಾಗುತ್ತೇವೆ, ಜನ್ಮವಿಲ್ಲದ ಸ್ಥಿತಿಯನ್ನು ಹೊಂದುತ್ತೇವೆ.

** ** **

## 09

**"ಯಾವುದು ಲಭಿಸಿದ ನಂತರ ಇನ್ನು ಹೊಂದಬೇಕಾದ ಲಾಭವೆನ್ನುವುದು ಯಾವುದು ಇಲ್ಲವೋ, ಯಾವ ಸುಖವನ್ನು ಅನುಭವಿಸಿದ ನಂತರ ಇನ್ನು ಹೊಂದಬೇಕಾದ ಸುಖವೆನ್ನುವುದು ಯಾವುದು ಇಲ್ಲವೋ, ಯಾವ ಜ್ಞಾನವನ್ನು ಹೊಂದಿದ ನಂತರ ಇನ್ನು ಹೊಂದಬೇಕಾದ ಜ್ಞಾನವೆನ್ನುವುದು ಯಾವುದು ಇಲ್ಲವೋ ಅದೇ ಬ್ರಹ್ಮವೆಂದು ತಿಳಿದುಕೋ" ಎಂದಿದ್ದಾರೆ ಶಂಕರಾಚಾರ್ಯರು.**

ಇಲ್ಲಿ ಬ್ರಹ್ಮವು ಲಭಿಸಿದರೆ ನಿಮಗಿನ್ನು ಯಾವ ಲಾಭವನ್ನು ಹೊಂದಬೇಕಾದ ಅಗತ್ಯವಿಲ್ಲ. ನೀವು ಎಷ್ಟೋ ಅಂದುಕೊಳ್ಳುತ್ತೀರಿ ನನಗೆ ಅದು ಬೇಕು, ಇದು ಬೇಕು, ಅದನ್ನು ಹೊಂದಬೇಕು, ಇದನ್ನು ಹೊಂದಬೇಕು, ಇದನ್ನು ಸಂಪಾದಿಸಬೇಕೆಂದು ಅವುಗಳಿಗಾಗಿ ಜೀವನವೆಲ್ಲಾ ಕಷ್ಟಪಟ್ಟು, ಎಷ್ಟೋ ಶ್ರಮಪಟ್ಟು ಸಂಪಾದಿಸುತ್ತೀರಿ. ಬಂಗಲೆ ಕಟ್ಟಬೇಕೆನ್ನುತ್ತೀರಿ, ಕಟ್ಟುತ್ತೀರಿ, ವ್ಯಾಪಾರವನ್ನು ಮಾಡಬೇಕೆನ್ನುತ್ತೀರಿ, ಮಾಡುವಿರಿ, ಒಳ್ಳೆಯ ಓದನ್ನು ಓದಬೇಕೆಂದುಕೊಳ್ಳುವಿರಿ, ಓದುವಿರಿ. ಅಂದುಕೊಂಡವೆಲ್ಲವು ಲಭಿಸಿದರೂ ಶರೀರವನ್ನು ಬಿಟ್ಟರೆ ಎಲ್ಲವನ್ನೂ ಬಿಟ್ಟು ಬಿಡುತ್ತೀರಿ.

ಮತ್ತೇ ಜನ್ಮ ತೆಗೆದುಕೊಳ್ಳುತ್ತಾರೆ, ಇದಕ್ಕೂ ಮೊದಲು ಏನು ಹೊಂದಿದ್ದಿರೋ, ಯಾವು ಲಭಿಸಿದ್ದವೋ ಮತ್ತೇ ಎಲ್ಲಾ ಬೇಕೆನ್ನುತ್ತಾರೆ, ಮತ್ತೇ ಜೀವನವೆಲ್ಲಾ ಅವುಗಳಿಗಾಗಿಯೇ ಪ್ರಯತ್ನಿಸುತ್ತಾರೆ. ಆ ಪ್ರಯತ್ನದಲ್ಲಿ ಕಷ್ಟಗಳು ಬರುತ್ತವೆ, ಆರ್ಥಿಕ ತೊಂದರೆಗಳು ಬರುತ್ತವೆ, ಕುಟುಂಬದಲ್ಲಿ ಜಗಳಗಳು ಬರುತ್ತವೆ, ಎಷ್ಟೋ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳುತ್ತಾರೆ, ನಿಷ್ಕ್ರಮಿಸುತ್ತಾರೆ.

ಮತ್ತೇ ಇನ್ನೊಂದು ಜನ್ಮವೆತ್ತಿದರೂ ಮತ್ತೆ ಅದೂ ಅಷ್ಟೇ. ಎಷ್ಟು ಜನ್ಮಗಳನ್ನು ಎತ್ತಿದರೂ, ನಿಮಗೆ ಎಷ್ಟು ಲಭಿಸಿದರೂ, ಇನ್ನೂ ಲಭಿಸಲಾರದವು ಇದ್ದೇ ಇರುತ್ತವೆ. ಅವುಗಳಿಗಾಗಿ ಪ್ರಯತ್ನಿಸುತ್ತಲೇ ಇರುತ್ತೀರಿ. ಆದರೆ ಶಂಕರಾಚಾರ್ಯರು ಏನು ಹೇಳಿದ್ದಾರೆಂದರೆ? ಇಷ್ಟೆಲ್ಲವುಗಳಿಗೆ ಪ್ರಯತ್ನಿಸುವ ಬದಲು ಆ ಬ್ರಹ್ಮಕ್ಕಾಗಿ ಪ್ರಯತ್ನಿಸಿರಿ. ಆ ಬ್ರಹ್ಮವೇ ನಿಮಗೆ ಲಭಿಸಿದರೆ ನನಗೆ ಇನ್ನೇನು ಅಗತ್ಯವಿಲ್ಲವೆಂದು ನೀವೇ ಅನ್ನುತ್ತೀರಿ.

360 ಜನ್ಮಗಳಲ್ಲಿ ಪ್ರಯತ್ನಿಸಿದರೂ ಇನ್ನೂ ಇನ್ನೂ ಎನ್ನುತ್ತಲೇ ಇರುತ್ತೀರಿ. ಆದರೆ ಆ ಬ್ರಹ್ಮಕ್ಕಾಗಿ ಪ್ರಯತ್ನಿಸಿ ಆತನನ್ನು ಹೊಂದಿದರೆ ಈ ಸೃಷ್ಟಿಯಲ್ಲಿ ನೀವು ಹೊಂದಬೇಕಾದದ್ದು ಯಾವುದೂ ಇರುವುದಿಲ್ಲ, ನಿಮಗೆ ಯಾವ ಲಾಭವೂ ಬೇಕಾಗಿಲ್ಲ ಎಂದು ಶಂಕರಾಚಾರ್ಯರು ಈ ಸಂದೇಶದ ಮೂಲಕ ಬೋಧಿಸಿದ್ದಾರೆ. ಆತನು ಇನ್ನು

ಏನು ಹೇಳಿದ್ದಾರೆಂದರೆ? ಯಾವ ಸುಖವನ್ನು ಅನುಭವಿಸಿದ ನಂತರ ಇನ್ನು ಹೊಂದಬೇಕಾದ ಸುಖವೆಂಬುದು ಯಾವುದು ಇಲ್ಲವೋ....... ಎಂದು ಹೇಳಿದ್ದಾರೆ.]

ಅಂದರೆ ಬ್ರಹ್ಮವನ್ನು ಹೊಂದಿದರೆ ಹೊಂದುವ ಸುಖವು ವರ್ಣನಾತೀತ. ಇಷ್ಟು ಜನ್ಮಗಳಲ್ಲಿ ಎಷ್ಟು ಸುಖಗಳನ್ನು ಹೊಂದಿದರೂ ನಿಮಗೆ ತೃಪ್ತಿಯಾಗಿಲ್ಲ. 360 ಜನ್ಮಗಳಲ್ಲಿ ವಿವಿಧ ರೀತಿಯ ಸುಖಗಳನ್ನು ಹೊಂದಿರುವಿರಿ. ಪುರುಷ ಜನ್ಮವನ್ನು ತೆಗೆದುಕೊಂಡು ಹೆಂಡತಿಯ ಸುಖವನ್ನು ಅನುಭವಿಸಿದ್ದೀರಿ, ಸ್ತ್ರೀ ಜನ್ಮವನ್ನು ತೆಗೆದುಕೊಂಡು ಗಂಡನ ಸುಖವನ್ನು ಅನುಭವಿಸಿದ್ದೀರಿ. ಒಂದು ಜನ್ಮದಲ್ಲಿ ಗಂಡು ಮಕ್ಕಳನ್ನು ಪಡೆದು ಆ ಮಕ್ಕಳಿಂದ ಇರುವ ಸುಖವನ್ನು ಅನುಭವಿಸಿದ್ದೀರಿ. ಇನ್ನೊಂದು ಜನ್ಮದಲ್ಲಿ ಹೆಣ್ಣು ಮಕ್ಕಳನ್ನು ಪಡೆದು, ಆ ಮಕ್ಕಳನ್ನು ಬೆಳೆಸುತ್ತಾ, ಆಡಿಸುತ್ತಾ, ಮುದ್ದಾಡುತ್ತಾ ಎಷ್ಟು ಆನಂದವನ್ನು ಹೊಂದುತ್ತೀರಿ. ಬಾಲ್ಯದೊಳಗೆ ಬಂದಾಗ ಅಲ್ಲಿ ಹೊಂದುವ ಸುಖಗಳೇ ಬೇರೆ. ಆ ಮಕ್ಕಳನ್ನು ನೋಡಿಕೊಂಡು ಮೈಮರೆತು ಬಿಡುತ್ತೀರಿ.

ಗಂಡು ಮಗುವು ಜನಿಸಿದರೆ ಏನೋ ಈ ಜನ್ಮದಲ್ಲಿಯೇ ಗಂಡು ಮಗುವನ್ನು ಹಡೆದಂತೆ, ಇನ್ನು ಯಾವ ಜನ್ಮದಲ್ಲೂ ಮಕ್ಕಳು ಇಲ್ಲದಂತೆ, ಎಷ್ಟು ಮೆರೆಯುತ್ತಿರೋ ಮತ್ತೇ ಎಷ್ಟು ಜನ್ಮಗಳಲ್ಲಿ ಹಡೆದರೆ ಆ ಸುಖವು ತೀರುತ್ತದೋ ಅರ್ಥವಾಗದು. ಕೆಲವರು ಮಕ್ಕಳ ಸುಖವೇ ಅಲ್ಲ, ಮೊಮ್ಮಕ್ಕಳ ಸುಖವನ್ನು ಕೂಡಾ ಅನುಭವಿಸುತ್ತಾರೆ. ಮೊಮ್ಮಕ್ಕಳ ಹೆಸರು ಹೇಳಿದರೇನೇ ಸಂಭ್ರಮಿಸುತ್ತಾರೆ. ಈ ಜನ್ಮದಲ್ಲಿಯೇ ಮೊಮ್ಮಕ್ಕಳು ಹುಟ್ಟಿದಂತೆ, ಮತ್ತೆ ಎಷ್ಟು ಜನ್ಮಗಳು ಇಂತಹ ಸುಖವನ್ನು ಕೋರಿಕೊಳ್ಳುತ್ತಾರೋ!.

ಹಾಗೇ ಧನವು! ಅನಂತವಾದ ಸಂಪತ್ತು ಹೊಂದಿ, ಎಷ್ಟೋ ಜನ್ಮಗಳಲ್ಲಿ ಧನದ ಸುಖವನ್ನು ಅನುಭವಿಸಿದ್ದಾರೆ. ಧನದ ಮೂಲಕ ಎಲ್ಲಾ ಸೌಕರ್ಯಗಳನ್ನು ಹೊಂದಿಸಿಕೊಂಡು ಸುಖಿಸುತ್ತಾರೆ. ಆದರೆ ಅವರಿಗೆ ತೃಪ್ತಿ ತೀರದು. ಮತ್ತೇ ಜನ್ಮಗಳನ್ನು ತೆಗೆದುಕೊಳ್ಳುತ್ತಾರೆ. ಮತ್ತೇ ಸಂಪಾದಿಸುತ್ತಾರೆ, ಮತ್ತೆ ಸುಖಪಡುತ್ತಾರೆ, ಮತ್ತೆ ಎಷ್ಟು ಜನ್ಮಗಳಲ್ಲಿ ಅವರಿಗೆ ತೃಪ್ತಿ ಉಂಟಾಗುತ್ತದೋ! ಹೀಗೆ ಇನ್ನು ಇನ್ನು ಹೊಂದಬೇಕೆಂದು ಪ್ರಯತ್ನಿಸುವಾಗ ಒಂದೊಂದು ಜನ್ಮದಲ್ಲಿ ಆರ್ಥಿಕ ತೊಂದರೆಗಳು ಬರುತ್ತವೆ. ಅಂದರೆ ಆರ್ಥಿಕವಾಗಿ ಪೆಟ್ಟುಗಳು ಬೀಳುತ್ತವೆ, ಒಬ್ಬೊಬ್ಬರಿಗೆ ಒಂದೊಂದು ರೀತಿಯ ಪೆಟ್ಟುಗಳು.

ಸುಖದ ಮಾತನ್ನು ದೇವರು ಬಲ್ಲ, ಇನ್ನು ಆ ಜನ್ಮವೆಲ್ಲಾ ಅಳುತ್ತಾ ಕುಳಿತುಕೊಳ್ಳುತ್ತಾರೆ. ಏಕೆ ಈ ಕಷ್ಟವು? ಈ ಜನ್ಮದಲ್ಲಿ ಬ್ರಹ್ಮವನ್ನು ಹೊಂದುವ ಪ್ರಯತ್ನವನ್ನು ಮಾಡಿರಿ. ಆತನನ್ನೇ ಹೊಂದಿದರೆ ನೀವೇ ಅನ್ನುತ್ತೀರಿ, ನನಗೆ ಇನ್ನು ಯಾವ ಸುಖವು ಬೇಡವೆಂದು ಯಾವ ಸುಖವನ್ನು ಅನುಭವಿಸಿದ ನಂತರ ಇನ್ನು

ಹೊಂದಬೇಕಾದ ಸುಖವೆಂಬುದು ಯಾವುದು ಇಲ್ಲವೋ ಆ ಸುಖವು ಬ್ರಹ್ಮವನ್ನು ಹೊಂದಿದರೆ ಲಭಿಸುತ್ತದೆ ಎಂದು ಶಂಕರಾಚಾರ್ಯರು ಹೇಳಿದ್ದಾರೆ.

ಅರ್ಥ ಮಾಡಿಕೊಳ್ಳಿ ಏಕೆ ಇವುಗಳಿಗಾಗಿ, ಅವುಗಳಿಗಾಗಿ ಹಂಬಲಿಸುತ್ತೀರಿ? ಸಂಪೂರ್ಣವಾಗಿ ಈ ಜನ್ಮದಲ್ಲಿಯೇ ಬ್ರಹ್ಮನನ್ನು ಹೊಂದುವ ಪ್ರಯತ್ನವನ್ನು ಮಾಡಿರಿ. ನೀವು ಎಷ್ಟೋ ಅದೃಷ್ಟವಂತರು, ಅದಕ್ಕೆ ಬ್ರಹ್ಮವನ್ನು ಹೊಂದುವ ಮಾರ್ಗ ನಿಮಗೆ ಲಭಿಸಿದೆ. ಲಭಿಸಿದಾಗ ನಿರ್ಲಕ್ಷ್ಯ ಮಾಡಿ, ಅಶ್ರದ್ಧೆ ಮಾಡಬೇಡಿರಿ. ನೀವು ಚೆನ್ನಾಗಿ ದೃಷ್ಟಿ ಇಟ್ಟರೆ ಇದೇ ಕೊನೆಯ ಜನ್ಮವಾಗುತ್ತದೆ. ನೀವು ದೃಷ್ಟಿ ಇಟ್ಟರೆ ಒಂದು ವೇಳೆ ಇನ್ನೊಂದು ಜನ್ಮ ಬಂದರೂ ಕೂಡಾ ಅದು ಖಚಿತವಾಗಿ ಕೊನೆಯ ಜನ್ಮವಾಗುತ್ತದೆ.


ಅವರು ಇನ್ನು ಏನೆಂದು ಹೇಳಿದ್ದಾರೆಂದರೆ? ಯಾವ ಜ್ಞಾನವನ್ನು ಹೊಂದಿದ ಮೇಲೆ ಇನ್ನು ಹೊಂದಬೇಕಾದ ಜ್ಞಾನವೆನ್ನುವುದು ಯಾವುದು ಇಲ್ಲವೋ ಅದೇ ಬ್ರಹ್ಮವೆಂದು ತಿಳಿದುಕೋ ಎಂದಿದ್ದಾರೆ. ಬ್ರಹ್ಮಕ್ಕೆ ಸಂಬಂಧಿಸಿದ ಜ್ಞಾನ ಬ್ರಹ್ಮ ಜ್ಞಾನ, ಅದನ್ನೇ ಆತ್ಮಜ್ಞಾನವೆನ್ನುತ್ತಾರೆ. ಆ ಆತ್ಮಕ್ಕೆ ಸಂಬಂಧಿಸಿದ್ದವನ್ನು ನೀನು ಎಷ್ಟು ತಿಳಿದರೆ ನೀನು ಅಷ್ಟು ಜ್ಞಾನವಂತನಾದಂತೆ ಲೆಕ್ಕ. ಇದನ್ನು ತಿಳಿದುಕೊಂಡ ನಂತರ ಇನ್ನು ಹೊಂದಬೇಕಾದ ಜ್ಞಾನವಿಲ್ಲ. ಪ್ರಾಪಂಚಿಕವಾಗಿ ಎಷ್ಟೋ ರೀತಿಯಾದಂತಹ ಜ್ಞಾನಗಳಿವೆ. ಅವೆಲ್ಲಾ ಅಸತ್ಯ ಜ್ಞಾನಗಳು. ಬ್ರಹ್ಮ ಜ್ಞಾನವೇ, ಆತ್ಮ ಜ್ಞಾನವೇ ಸತ್ಯ ಜ್ಞಾನವು.

ಆ ಸತ್ಯ ಜ್ಞಾನವನ್ನು ನೀನು ಹೊಂದಿದರೆ ನೀನು ಇನ್ನು ಹೊಂದಬೇಕಾದ ಜ್ಞಾನವೇನೂ ಇಲ್ಲ. ಆ ಜ್ಞಾನವು ನೀನು ಬ್ರಹ್ಮವನ್ನು ಆಶ್ರಯಿಸಿದಾಗ ಬರುತ್ತದೆ. ಬ್ರಹ್ಮನು ಅಂದರೆ ಆತ್ಮ, ಅಂದರೆ ಆತ್ಮನನ್ನು ಆಶ್ರಯಿಸಿದಾಗ ಬರುತ್ತದೆ, ಮತ್ತೇ ಆತನನ್ನು ಆಶ್ರಯಿಸುವ ಮಾರ್ಗವೇ ಪತ್ರೀಜಿಯವರು ನಮ್ಮೆಲ್ಲರಿಗೆ ಬೋಧಿಸಿದ "ಶ್ವಾಸದ ಮೇಲೆ ಗಮನ ಧ್ಯಾನ". ಇನ್ನು ಯಾವ ರೀತಿಯಿಂದ ಧ್ಯಾನಗಳಿಂದ ಆತ್ಮನನ್ನು ಆಶ್ರಯಿಸಲಾರರು, ಸತ್ಯವನ್ನು ಆಶ್ರಯಿಸಲಾರರು, ಆ ಸತ್ಯ ಜ್ಞಾನವನ್ನು ಪಡೆಯಲಾರರು. ನೀವು ಗೈಡಿಂಗ್‌ಗಳನ್ನು ಮಾಡಿದರೂ, ಸಂಗೀತವನ್ನಿಟ್ಟುಕೊಂಡು ಕುಳಿತರೂ ನಿಮಗೆ ಜ್ಞಾನವೆಂದಿಗೂ ಬರುವುದಿಲ್ಲ.

ಆತನನ್ನು ಹೊಂದಿದರೆ ಇನ್ನು ನೀನು ಹೊಂದಬೇಕಾದ ಲಾಭವೆಂಬುದು ಏನೂ ಇರುವುದಿಲ್ಲ, ನೀನು ಅನುಭವಿಸಬೇಕಾದ ಸುಖವೆಂಬುದು ಇನ್ನು ಏನು ಇರುವುದಿಲ್ಲ, ನೀನು ಹೊಂದಬೇಕಾದ ಜ್ಞಾನವಂತೂ ಇನ್ನೇನೂ ಇರದು, ನೀನು ನೋಡಬೇಕಾದವು ಇರುವುದಿಲ್ಲ, ನೀನು ತಿಳಿದುಕೊಳ್ಳಬೇಕಾದಂತವು ಕೂಡಾ ಏನೂ ಇರುವುದಿಲ್ಲ, ನಿಜವಾಗಿ ನೀನು ಜನ್ಮವನ್ನು ತೆಗೆದುಕೊಳ್ಳಬೇಕಾದ ಅಗತ್ಯ ಕೂಡಾ ಇಲ್ಲ.

ಅದಕ್ಕೆ ಶಂಕರಾಚಾರ್ಯರನ್ನು ಅವರ ತಾಯಿ ಮಗು, ಮದುವೆ ಮಾಡಿಕೊ, ಹಾಯಾಗಿ ಸುಖವಾಗಿರು ಎಂದರೆ....... ಆತನು ನಾನು ಮಾಡಿಕೊಳ್ಳುವುದಿಲ್ಲಮ್ಮ, ಆ ಬ್ರಹ್ಮಸ್ಥಿತಿಯನ್ನು ಹೊಂದಿದ್ದೇನೆ. ಅವೆಲ್ಲಾ ನನಗೆ ಬಹಳ ಅಲ್ಪವಾದವುಗಳು. ಇದಕ್ಕೂ ಮೊದಲು ನಾನು ಸಂಸಾರ ಮಾಡಿಲ್ಲವೆಂದು ಕೊಂಡಿರುವೆಯಾ? ಇದಕ್ಕೂ ಮೊದಲು ನಾನು ಮಕ್ಕಳನ್ನು ಹಡೆದಿಲ್ಲವೆಂದುಕೊಂಡಿರುವೆಯಾ? ಇದಕ್ಕೂ ಮೊದಲು ನಾನು ಧನವನ್ನು ಸಂಪಾದಿಸಿಕೊಂಡಿಲ್ಲವೆನ್ನುವೆಯಾ? ಇದಕ್ಕೂ ಮೊದಲು ನಾನು ಸುಖ ಪಟ್ಟಿಲ್ಲವೆಂದು ಕೊಂಡಿರುವೆಯಾ? ಎಲ್ಲಾ ಅನುಭವಿಸಿದೇನಮ್ಮಾ....... ಇನ್ನು ಅವು ನನಗೇಕಮ್ಮಾ! ಎಂದು ತಾಯಿಗೆ ಮೃದುವಾಗಿ ಹೇಳಿದರು.

ಅಷ್ಟೇ ಅಲ್ಲ, ಆತನು ಹೊಂದಿದ ಜ್ಞಾನವನ್ನು ಪ್ರಪಂಚ ವ್ಯಾಪ್ತಿಯಾಗಿ ತಿರುಗಿ ಅಂದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಮೂರು ಬಾರಿ ಸಂಚರಿಸಿ ಬೋಧಿಸಿದ್ದಾರೆ. 32 ವರ್ಷಗಳಲ್ಲಿಯೇ ಆತನು ನಿಷ್ಕ್ರಮಿಸಿದನು ಎಂತಹ ಮಹನೀಯನಾತ! ಎಷ್ಟು ಶ್ರೇಷ್ಠವಾದ ಸಂದೇಶಗಳನ್ನು ಕೊಟ್ಟಿದ್ದಾನೆ! ಆ ಸ್ವಲ್ಪ ಸಮಯದಲ್ಲಿ ಎಷ್ಟು ಗ್ರಂಥಗಳನ್ನು ಬರೆದನು! ಹಾಗಾಗಿ ನಾವು ನಮ್ಮ ಸಮಯವನ್ನು ಏಕೆ ವ್ಯರ್ಥ ಮಾಡಬೇಕು? ಕೆಲಸಕ್ಕೆ ಬಾರದ ಕೆಲಸಗಳನ್ನು ಮಾಡುತ್ತಾ ಸಮಯ ಸಿಕ್ಕರೆ ಗಿಡಗಳನ್ನು ಬೆಳೆಸುತ್ತಾರೆ, ಮನೆಯನ್ನೆಲ್ಲಾ ಶುಭ್ರ ಮಾಡಿಕೊಳ್ಳುತ್ತಾರೆ. ಮನೆಯನ್ನು ಕನ್ನಡಿಯಂತೆ ಇಟ್ಟುಕೊಳ್ಳುತ್ತಾರೆ. ಕನ್ನಡಿಯಂತೆ ಇಟ್ಟುಕೊಳ್ಳಬೇಕಾಗಿರುವುದು ಮನೆಯನ್ನಲ್ಲ, ಮನಸ್ಸನ್ನು.



# "ಧ್ಯಾನ ಮಾಡುವ ವಿಧಾನ"

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

**ಧ್ಯಾನವನ್ನು ಯಾರಾದರೂ ಮಾಡಬಹುದು**
**ಯಾವ ವಯಸ್ಸಿನವರಾದರೂ ಮಾಡಬಹುದು**
**ಯಾವ ಸಮಯದಲ್ಲಿಯಾದರೂ ಮಾಡಬಹುದು**
**ಯಾವ ಸ್ಥಳದಲ್ಲಿಯಾದರೂ ಮಾಡಬಹುದು.**

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.


**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | | |
|---|---|---|
| **ಬ್ಯಾಂಕ್ ಹೆಸರು** | : ಭಾರತೀಯ ಸ್ಟೇಟ್ ಬ್ಯಾಂಕ್ | – **State Bank of India** |
| **ಶಾಖೆಯ ಹೆಸರು** | : ಚಾಮರಾಜಪೇಟೆ ಶಾಖೆ | – **Chamarajapete Branch** |
| **ಖಾತೆ ಸಂಖ್ಯೆ** | : **30828057680 : I.F.S.C. ಕೋಡ್** | – **S.B.I.N 0005794** |
| **ಖಾತೆಯ ಹೆಸರು** | : ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ | – **K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.



ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



ಶಂಕರಾಚಾರ್ಯರು ಬ್ರಹ್ಮದ ಕುರಿತು, ಬ್ರಹ್ಮವೊಂದರ ಶ್ರೇಷ್ಠತೆಯನ್ನು ಕುರಿತು ಎಷ್ಟೋ ವಿಷಯಗಳನ್ನು ತಿಳಿಸಿದ್ದಾರೆ.

“ಯಾವುದನ್ನು ನೋಡಿದರೆ ಬೇರೆ ಇರತದ್ದನ್ನು ನೋಡಬೇಕಾದ ಅಗತ್ಯವಿಲ್ಲವೋ, ಯಾವುದನ್ನು ಹೊಂದಿದ್ದರೆ ಮತ್ತೆ ಜನಿಸಬೇಕಾದ ಅಗತ್ಯವಿಲ್ಲವೋ, ಯಾವುದನ್ನು ತಿಳಿದುಕೊಂಡರೆ ಬೇರೆ ತರದ್ದನ್ನು ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲವೋ ಅದೇ ಬ್ರಹ್ಮವೆಂದು ತಿಳಿದುಕೊಳ್ಳಬೇಕು.”

“ಯಾವುದು ಲಭಿಸಿದ ನಂತರ ಇನ್ನು ಹೊಂದಬೇಕಾದ ಲಾಭವೆಂಬುದು ಯಾವುದು ಇಲ್ಲವೋ, ಯಾವ ಸುಖವನ್ನು ಅನುಭವಿಸಿದ ನಂತರ ಇನ್ನು ಹೊಂದಬೇಕಾದ ಸುಖವೆಂಬುದು ಯಾವುದು ಇಲ್ಲವೋ, ಯಾವ ಜ್ಞಾನವನ್ನು ಹೊಂದಿದ ಬಳಿಕ ಇನ್ನು ಹೊಂದಬೇಕಾದ ಜ್ಞಾನವೆಂಬುದು ಯಾವುದು ಇಲ್ಲವೋ ಅದೇ ಬ್ರಹ್ಮವೆಂದು ತಿಳಿದುಕೊಳ್ಳಬೇಕು.”

“ಸೂಕ್ಷ್ಮವಲ್ಲದದ್ದು, ಸ್ಥೂಲವಲ್ಲದ್ದು, ಗಿಡ್ಡವಾಗದ್ದು, ಉದ್ದವಾಗದ್ದು, ಹುಟ್ಟಿಲ್ಲದದ್ದು, ಬದಲಾವಣೆಯಾಗದ್ದು, ರೂಪವಿಲ್ಲದ್ದು, ಗುಣವಿಲ್ಲದದ್ದು, ವರ್ಣವಿಲ್ಲದ್ದು, ಹೆಸರಿಲ್ಲದ್ದು, ಯಾವುದೋ ಅದೇ ಬ್ರಹ್ಮವೆಂದು ಧ್ಯಾನಿಸಬೇಕು”.

“ಅಷ್ಟೋ ಅಲ್ಲ ಯಾವುದಾದರೆ ಎರಡಾಗ್ದೋ, ನಿರಂತರವೂ ಆನಂದ ಸ್ವರೂಪ ವಾಗಿರುವುದೋ, ಏಕವಾದದ್ದೋ ಅದು ಬ್ರಹ್ಮವೆಂದು ತಿಳಿದುಕೊಳ್ಳಬೇಕು>”

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವು

ರೂ 40/-




ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada • www.meditationeverywhere.org
• www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀರಾಮಧಾಮ ಧ್ಯಾನಕೇಂದ್ರ,
ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503
ವಿಜಯಲಕ್ಷ್ಮಿ, ಎಸ್.ಎನ್ / 8050082689